# ಎಸ್ತೇರಳು

## ಮುನ್ನುಡಿ

"ಎಸ್ತೇರಳು" ಎಂಬ ಬೈಬಲಿನ ಗ್ರಂಥವನ್ನು ಮೂಲದಲ್ಲಿ ಹಿಬ್ರು ಹಾಗು ಗ್ರೀಕ್ ಭಾಷೆಯಲ್ಲಿ ಬರೆದಿದೆ. ಎರಡು ಮೂಲಗಳನ್ನೂ ಹೋಲಿಸಿ ನೋಡಿದಾಗ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ; ಹಿಬ್ರು ಮೂಲಕ್ಕಿಂತ ಗ್ರೀಕ್ ಮೂಲದಲ್ಲಿ ಹೆಚ್ಚು ವಿವರಗಳು ಇವೆ. ಘಟನೆಗಳ ಕಾಲ ಒಂದೇ ಆಗಿದ್ದರೂ, ಗ್ರೀಕ್ ವಿಭಾಗದಲ್ಲಿ ವಿವಿಧ ಹೆಸರುಗಳಿರುವುದನ್ನೂ, ಧಾರ್ಮಿಕ ವಿಷಯಗಳಿಗೆ ಹೆಚ್ಚು ಒತ್ತುಕೊಟ್ಟಿರುವುದನ್ನೂ ವಾಚಕರು ಗಮನಿಸಬಹುದು.

ಹಿಬ್ರು ಮೂಲದಲ್ಲಿ ಕಾಣದ, ಗ್ರೀಕ್ ವಿಭಾಗದಲ್ಲಿ ಮಾತ್ರ ಕಾಣುವ ವಿಷಯಗಳನ್ನು ಕನ್ನಡ ಅಂಕೆ ೧ರಿಂದ ೬ರವರೆಗೆ ಸ್ಪಷ್ಟವಾಗಿ ವಿಂಗಡಿಸಲಾಗಿದೆ. ಇದು ವಿಭಿನ್ನವಾದ ಮುನ್ನುಡಿ ಹಾಗೂ ಮುಕ್ತಾಯಗಳನ್ನು ಒಳಗೊಂಡಿದೆ. ದಾಖಲೆಗಳ ಅಧಿಕೃತ ನಿರೂಪಣೆ, ಪ್ರಾರ್ಥನೆ ಮತ್ತು ಅದರ ಪ್ರತಿಫಲ ಮುಂತಾದ ಧಾರ್ಮಿಕ ವಿಷಯಗಳ ಪ್ರಸ್ತಾಪ, ಗ್ರೀಕ್ ವಿಭಾಗದಲ್ಲಿ ಕಂಡುಬರುವ ಪ್ರಮುಖ ಅಂಶಗಳಾಗಿವೆ. ಈ ಗ್ರಂಥ ರಚನೆಯ ಕಾಲ ಕ್ರಿ.ಪೂ. ಎರಡನೆಯ ಶತಮಾನದ ಪೂರ್ವಾರ್ಧಭಾಗ.

## ಪರಿವಿಡಿ


| | | | | |
|---|---|---|---|---|
| ರಾಣಿಯಾದ ಎಸ್ತೇರಳು | – | ೧.1 | – | 2.23 |
| ಯೆಹೂದ್ಯರ ವಿರುದ್ಧ ಹಾಮಾನನ ಒಳಸಂಚು | – | 3.1 | – | 5.14 |
| ಹಾಮಾನನ ಹತ್ಯೆ | – | 6.1 | – | 7.10 |
| ಶತ್ರುಗಳ ಮೇಲೆ ಯೆಹೂದ್ಯರ ವಿಜಯ | – | 8.1 | – | ೬.10 |
| ಅನುಬಂಧ | | | | |


## ಮೊರ್ದೆಕೈಯ ಸ್ವಪ್ನ

೧ 1–2 ಬಾಬಿಲೋನಿಯದ ಅರಸ ನೆಬೂಕದ್ನೆಚ್ಚರನು ಜೆರುಸಲೇಮ್ ನಗರವನ್ನು ಆಕ್ರಮಿಸಿದನು. ಆಗ
ಜುದೇಯ ನಾಡಿನ ಅರಸ ಯೆಹೋಯಾಕೀಮನೊಂದಿಗೆ ಬೆನ್ಯಾಮೀನ ಕುಲದ ಮೊರ್ದೆಕೈಯೆಂಬ
ಯೆಹೂದ್ಯನೊಬ್ಬನು ಸೆರೆಹೋದನು. 3ಮೊರ್ದೆಕೈಯನು ಯಾಯೀರ ಎಂಬವನ ಮಗ. ಯಾಯೀರನು
ಕೀಷ ಮತ್ತು ಶಿಮಾಯ ವಂಶದ ಸಂತತಿಯವನು. ಮೊರ್ದೆಕೈಯನು ಪರ್ಷಿಯಾ ದೇಶದ ಶೂಷನ
ನಗರದಲ್ಲಿ ಅಹಷ್ವೇರೋಷ ರಾಜನ ಆಸ್ಥಾನದಲ್ಲಿ ಒಬ್ಬ ಮುಖ್ಯ ಅಧಿಕಾರಿಯಾಗಿದ್ದನು.
ಅಹಷ್ವೇರೋಷನ ಆಳ್ವಿಕೆಯ ಎರಡನೇ ವರ್ಷದ, ನಿಸಾನ ಮಾಸದ ಮೊದಲನೇ ದಿನದಂದು
ಮೊರ್ದೆಕೈಯನಿಗೆ ಒಂದು ಕನಸು ಬಿತ್ತು. 4ಇಗೋ, ಎಲ್ಲೆಲ್ಲೂ ಗದ್ದಲ ಹಾಗು ಗೊಂದಲ, ಗುಡುಗು ಮತ್ತು
ಭೂಕಂಪ, ಭೂಮಿಯಲ್ಲೆಲ್ಲಾ ಕೋಲಾಹಲ ಕಂಡುಬಂದಿತು. ಆಗ ಎರಡು ಭೀಕರ ಘಟಸರ್ಪಗಳು
ಕಾಣಿಸಿಕೊಂಡವು: 5ಅವು ಒಂದಕ್ಕೊಂದು ವಿರುದ್ಧ ಕಾಳಗಕ್ಕೆ ಸಜ್ಜಾಗಿ ನಿಂತಿದ್ದವು. 6ಘೋರವಾಗಿ
ಗರ್ಜಿಸಿದವು. ಸಜ್ಜನರಿಂದ ಕೂಡಿದ ದೇವರ ರಾಷ್ಟ್ರದ ವಿರುದ್ಧ ಎಲ್ಲಾ ರಾಜ್ಯಗಳು ಯುದ್ಧಮಾಡಲು
ಸಿದ್ಧವಾದವು. 7ಜಗತ್ತಿನಾದ್ಯಂತ ಕಾರ್ಗತ್ತಲೆ ಕವಿದಿತ್ತು. ಕಷ್ಟ ಸಂಕಟದ, ನಾಶಪರಿವಿನಾಶದ ಕರಾಳ ದಿನ
ಆಗಿತ್ತು ಅದು. 8ದೇವರ ಸಜ್ಜನರೆಲ್ಲರಿಗೆ ಉಪದ್ರವವುಂಟಾಗಿ ತಮಗೇನಾಗುವುದೋ ಎಂಬ ಭೀತಿ ಅವರನ್ನು
ಆವರಿಸಿತು. ಎಲ್ಲರು ಮರಣಕ್ಕೆ ಸಿದ್ಧರಾದರು; 9ದೇವರ ಸಹಾಯಕ್ಕಾಗಿ ಮೊರೆ ಇಟ್ಟರು. ಇದರ

ಪರಿಣಾಮವಾಗಿ ಸಣ್ಣ ಬುಗ್ಗೆಯೊಂದು ಚಿಮ್ಮಿ ದೊಡ್ಡ ನದಿಯಾಗಿ ರಭಸದಿಂದ ಹರಿಯತೊಡಗಿತು. 10ಸೂರ್ಯೋದಯ ಆಗಿ ಬೆಳಗಾಯಿತು. ದೀನದಲಿತರು ಶಕ್ತಿಯುತರಾಗಿ ಸೊಕ್ಕಿನ ಶತ್ರುಗಳನ್ನು ಕಬಳಿಸಿದರು.

11 ಮೊರ್ದೆಕೈ ಎಚ್ಚೆತ್ತನು. ಕನಸಿನಲ್ಲಿ ಕಂಡ ದೈವಯೋಜನೆಯನ್ನು ಚಿಂತಿಸಿದನು. ದಿನವಿಡೀ ಅದರ ಬಗ್ಗೆ ಆಲೋಚಿಸಿ ಅದರ ಅರ್ಥವನ್ನು ಗ್ರಹಿಸಿಕೊಳ್ಳಲು ಪ್ರಯತ್ನಿಸಿದನು.

## ಮೊರ್ದೆಕೈಯಿಂದ ಅರಸನ ಪ್ರಾಣರಕ್ಷಣೆ

12 ಮೊರ್ದೆಕೈ ಅರಮನೆಯ ಅಂಗಳದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದನು. ಅಲ್ಲಿ ರಾಜಕಂಚುಕಿಗಳಾದ ಗಬಥ ಮತ್ತು ತರ್ರಾ ಎಂಬ ಇಬ್ಬರು ಕಾವಲಿದ್ದರು. 13ಅವರು ಒಳಸಂಚು ಮಾಡುತ್ತಿರುವುದು ಕೇಳಿಬಂದಿತು. ಮೊರ್ದೆಕೈ ಅವರ ಮಾತುಗಳನ್ನು ಎಚ್ಚರಿಕೆಯಿಂದ ಕೇಳಿಸಿಕೊಂಡನು. ಅವರಿಬ್ಬರು ಅರಸನನ್ನು ಕೊಲ್ಲಲು ಸಂಚು ಮಾಡುತ್ತಿರುವುದು ತಿಳಿದುಬಂದಿತು. ಕೂಡಲೆ ಮೊರ್ದೆಕೈ, ಅಹಷ್ವೇರೋಷ ರಾಜನ ಬಳಿಗೆ ತೆರಳಿ ಕಂಚುಕಿಯರ ಒಳಸಂಚಿನ ಬಗ್ಗೆ ವರದಿ ಮಾಡಿದನು. 14ಅರಸ ಕಂಚುಕಿಯರನ್ನು ಕರೆಸಿ ಪ್ರಶ್ನಿಸಿದನು. ಅವರಿಬ್ಬರು ತಪ್ಪನ್ನು ಒಪ್ಪಿಕೊಂಡದ್ದರಿಂದ ಅವರಿಗೆ ಮರಣದಂಡನೆ ವಿಧಿಸಲಾಯಿತು.

15 ಈ ಘಟನೆಯನ್ನು ಅರಸನು ತನ್ನ ಅಧಿಕೃತ ಪುಸ್ತಕದಲ್ಲಿ ದಾಖಲೆಯಾಗಬೇಕೆಂದು ಆಜ್ಞಾಪಿಸಿದನು. ಮೊರ್ದೆಕೈಯನು ಕೂಡ ಇದನ್ನು ದಾಖಲೆ ಮಾಡಿಕೊಂಡನು. 16ಬಳಿಕ ಅರಸನು ಮೊರ್ದೆಕೈಯನ್ನು ತನ್ನ ಆಸ್ಥಾನದಲ್ಲಿ ಉನ್ನತ ಪದವಿಗೆ ನೇಮಿಸಿದನು. ಮಾತ್ರವಲ್ಲ, ಅವನು ಮಾಡಿದ ಉಪಕಾರಕ್ಕಾಗಿ ತಕ್ಕ ಬಹುಮಾನವನ್ನು ಕೊಟ್ಟನು.

17 ಆಗ ಅಗಾಗನ ವಂಶದವನೂ ಹೆಮ್ಮೆದಾತನ ಮಗನೂ ಆದ ಹಾಮಾನನು ಆಸ್ಥಾನದಲ್ಲಿ ಗಣ್ಯಸ್ಥಾನವನ್ನು ಅಲಂಕರಿಸಿದ್ದನು. ಮೊರ್ದೆಕೈಯನು ರಾಜಕಂಚುಕಿಗಳ ಮರಣ ದಂಡನೆಗೆ ಕಾರಣನಾಗಿದ್ದರಿಂದ ಅವನಿಗೂ ಅವನ ಸ್ವಜನ ಯೆಹೂದ್ಯರಿಗೂ ಹಾನಿಯನ್ನು ಉಂಟುಮಾಡಲು ಅವನು ಹವಣಿಸಿದನು.

## ರಾಜಾಜ್ಞೆಯ ಉಲ್ಲಂಘನೆ

**1** 1–2ಭಾರತ (ಇಂಡಿಯಾ) ದೇಶದಿಂದ ಮೊದಲುಗೊಂಡು ಇಥಿಯೋಪಿಯ ದೇಶದವರೆಗೂ ಇದ್ದ 127 ಸಂಸ್ಥಾನಗಳನ್ನು ಅರಸ ಅಹಷ್ವೇರೋಷನು ಆಳುತ್ತಿದ್ದನು. 3ಅರಸನು ತನ್ನ ರಾಜಧಾನಿಯಾಗಿದ್ದ ಶೂಷನ್ ನಗರದಲ್ಲಿ ರಾಜ ಸಿಂಹಾಸನವನ್ನೇರಿ ಆಡಳಿತ ನಡೆಸುತ್ತಿದ್ದ ಮೂರನೆಯ ವರ್ಷದಲ್ಲಿ ತನ್ನ ಎಲ್ಲಾ ಉನ್ನತ ಅಧಿಕಾರಿಗಳಿಗೂ ಪರಿವಾರದವರಿಗೂ ಒಂದು ಭಾರಿ ಔತಣವನ್ನೇರ್ಪಡಿಸಿದನು. ಪರ್ಷಿಯ ಮತ್ತು ಮೇದ್ಯ ದೇಶಗಗಳ ದಂಡನಾಯಕರೂ, ಪದಾಧಿಕಾರಿಗಳೂ ಸಂಸ್ಥಾನಾಧಿಕಾರಿಗಳೂ ಅರಸನ ಮುಂದೆ ಉಪಸ್ಥಿತರಿದ್ದರು. 4ಅರಸನು ತನ್ನ ಘನರಾಜ್ಯದ ಸಿರಿಸಂಪತ್ತನ್ನೂ ವೈಭವವನ್ನೂ ರಾಜ್ಯದ ಆಡಂಬರವನ್ನೂ ಅವರೆಲ್ಲರ ಮುಂದೆ ಬಹಳ ದಿನಗಳವರೆಗೆ, ಅಂದರೆ, ನೂರೆಂಬತ್ತು ದಿನಗಳವರೆಗೆ ಪ್ರದರ್ಶಿಸಿದನು. 5ಆ ದಿನಗಳು ಕಳೆದನಂತರ ಅರಸನು ಶೂಷನ್ ನಗರದ ನಿವಾಸಿಗಳಿಗೆ ಶ್ರೀಮಂತ ಬಡವ ಎಂಬ ಯಾವ ಭೇದ ಭಾವಮಾಡದೆ ಎಲ್ಲರಿಗೂ ಅರಮನೆಯ ತೋಟದ ಅಂಗಳದಲ್ಲಿ ಏಳುದಿನಗಳ ಪರಿಯಂತರ ದೊಡ್ಡ ಔತಣವನ್ನು ಏರ್ಪಡಿಸಿದನು. 6ಅಂಗಳದಲ್ಲಿ ಬಿಳಿ, ಹಸಿರು, ನೀಲಿವರ್ಣದ ಪರದೆಗಳು ರಕ್ತವರ್ಣದ ನಾರಿನ ಹಗ್ಗಗಳಿಂದ ಅಮೃತ ಶಿಲೆಯ ಬೆಳ್ಳಿಯ ಉಂಗುರಗಳಿಗೆ ತೂಗುಹಾಕಲಾಗಿದ್ದವು. ಜರತಾರಿ ಎಳೆಗಳಿಂದ ಕಸೂತಿ ಮಾಡಿದ ಸುಖಾಸನ ಪೀಠಗಳು, ಕೆಂಪು, ಬಿಳಿ, ಹಳದಿ ಹಾಗೂ ಕಪ್ಪುವರ್ಣದ ಅಮೃತಶಿಲೆಯ ಹಾಸುಗಲ್ಲುಗಳಿಂದ ರಚಿತವಾದ ನೆಲದ ಮೇಲೆ ಇಡಲಾಗಿದ್ದವು. 7ನಾನಾ ಆಕಾರದ ಬಂಗಾರ ಪಾತ್ರೆಗಳಲ್ಲಿ ಅರಸನ ಔದಾರ್ಯಕ್ಕೆ ತಕ್ಕಂತೆ ಧಾರಾಳವಾಗಿ ದ್ರಾಕ್ಷಾರಸವನ್ನು ಕುಡಿಯಲು ಕೊಡುವ ವ್ಯವಸ್ಥೆ ಮಾಡಲಾಗಿತ್ತು. 8ಮಧುಪಾನ ಸೇವನೆಯಲ್ಲಿ ಪ್ರತಿಯೊಬ್ಬನಿಗೂ ತನ್ನ ಇಚ್ಛಾನುಸಾರ ಕೊಡಬೇಕೆಂತಲೂ ಯಾರಿಗೂ ಒತ್ತಾಯ ಮಾಡಬಾರದೆಂದೂ ಸೇವಕರಿಗೆ ಅರಸನು ಆದೇಶವಿತ್ತಿದ್ದನು. 9ವಷ್ಟಿರಾಣಿಯು, ಮಹಿಳೆಯರಿಗೋಸ್ಕರ ಅರಮನೆಯಲ್ಲಿ ಪ್ರತ್ಯೇಕ ಏರ್ಪಾಡು ಮಾಡಿಸಿದ್ದಳು.

10 ಏಳನೆಯ ದಿನ ಅರಸ ಅಹಷ್ವೇರೋಷನು ಮಧುಪಾನ ಮಾಡಿ ಆನಂದ ಲಹರಿಯಲ್ಲಿದ್ದಾಗ ಬಹು ಸೌಂದರ್ಯವತಿಯಾದ ತನ್ನ ಪತ್ನಿಯ ರೂಪರಾಶಿಯನ್ನು ತನ್ನ ಪ್ರಜೆಗಳ ಹಾಗೂ ಪದಾಧಿಕಾರಿಗಳ ಮುಂದೆ ಪ್ರದರ್ಶಿಸುವ ಸಲುವಾಗಿ 11ರಾಜಮುಕುಟವನ್ನು ಧರಿಸಿದ ಆಕೆಯನ್ನು ರಾಜಸನ್ನಿಧಿಗೆ ಕರೆತರುವಂತೆ ಆಸ್ಥಾನ ಸೇವಕರಾದ ಮೆಹೂಮಾನ್, ಬಿಜೆತಾ, ಹರ್ಬೋನಾ, ಬಿಗೆತಾ, ಅಬಗೆತಾ, ಜೇತರ್, ಕರ್ಕಸ್ ಎಂಬ ಏಳು ಮಂದಿ ಕಂಚುಕಿಯರಿಗೆ ಅಪ್ಪಣೆ ಮಾಡಿದನು. 12ಆದರೆ, ಕಂಚುಕಿಗಳು ರಾಜಾಜ್ಞೆಯನ್ನು ವಷ್ಟಿರಾಣಿಗೆ ತಿಳಿಸಿದಾಗ ಆಕೆ ಬರಲು ನಿರಾಕರಿಸಿದಳು. ಇದನ್ನು ಕೇಳಿದಾಗ ಅರಸನು ಕುಪಿತಗೊಂಡು, ರೌದ್ರಾವೇಶನಾದನು.

13 ವಿಧಿನಿಯಮಗಳನ್ನು ಬಲ್ಲ ಪಂಡಿತರೆಲ್ಲರ ಮುಂದೆ ಅರಮನೆಯ ಸಂಗತಿಗಳನ್ನು ಇಡುವ ಪದ್ಧತಿಯಿತ್ತು. 14ಅರಸ ಅಹಷ್ವೇರೋಷನ ಆಸ್ಥಾನದಲ್ಲಿ, ರಾಜ ಸಾನಿಧ್ಯ ಸೇವಕರೂ ಪದಾಧಿಕಾರಿಗಳೂ ಆಗಿದ್ದ ಕರ್ಷೆನಾ, ಶೇತಾರ್, ಅದ್ಮಾತಾ, ತರ್ಷೀಷ್, ಮೆರೆಸ್, ಮರ್ಸೆನಾ, ಮೆಮೂಕಾನ್ ಎಂಬ ಏಳು ಮಂದಿ ಪರ್ಷಿಯ ಮತ್ತು ಮೇದ್ಯ ದೇಶಗಳ ರಾಜ ಪ್ರಮುಖರಿದ್ದರು. ಸಮಯೋಚಿತ ವ್ಯವಹಾರ ಜ್ಞಾನ ಹೊಂದಿದವರಾದ ಇವರನ್ನು ಅರಸನು, ಈ ವಿಷಯವಾಗಿ ವಿಚಾರಿಸಿದನು. 15"ಕಂಚುಕಿಗಳ ಮುಖಾಂತರ ತಿಳಿಯಪಡಿಸಿದ ರಾಜಾಜ್ಞೆಯನ್ನು ಉಲ್ಲಂಘಿಸಿದ ವಷ್ಟಿರಾಣಿಯ ವಿರುದ್ಧ ಯಾವ ನ್ಯಾಯಬದ್ಧವಾದ ಕ್ರಮ ತೆಗೆದುಕೊಳ್ಳಬೇಕು?" ಎಂದು ಕೇಳಿದನು.

16 ಅರಸನ ಮುಂದೆಯೂ ನೆರೆದಿದ್ದ ಪದಾಧಿಕಾರಿಗಳ ಮುಂದೆಯೂ ಇದಕ್ಕೆ ಉತ್ತರ ಈಯುತ್ತ ಮೆಮೂಕನು: "ವಷ್ಟಿರಾಣಿಯು ಬಗೆದಿರುವ ಅವಮಾನ ಅರಸನೊಬ್ಬನ ವಿರುದ್ಧ ಮಾತ್ರವಲ್ಲ, ಅರಸನ ರಾಜ್ಯದಲ್ಲಿರುವ ಎಲ್ಲಾ ಪದಾಧಿಕಾರಿಗಳ ಹಾಗೂ ಪ್ರಜೆಗಳ ವಿರುದ್ಧವೂ ಆಗಿದೆ. 17ಹೇಗೆಂದರೆ, ವಷ್ಟಿರಾಣಿಯ ಈ ವರ್ತನೆ ಇತರ ಎಲ್ಲಾ ಸ್ತ್ರೀಯರಿಗೂ ತಿಳಿದು ಬಂದು ಅವರೂ ತಮ್ಮ ಗಂಡಂದಿರನ್ನು ತಿರಸ್ಕಾರಭಾವದಿಂದ ಕಾಣತೊಡಗುವರು. 'ಅಹಷ್ವೇರೋಷನು ರಾಣಿವಷ್ಟಿಗೆ ತನ್ನ ಮುಂದೆ ಬರಲು ಹೇಳಿ ಕಳುಹಿಸಿದನು, ಆದರೆ ಆಕೆ ಬರಲು ನಿರಾಕರಿಸಿದಳು' ಎಂದು ಹೇಳಿಕೊಂಡು ಹೀಯಾಳಿಸುವರು. 18ಇದಲ್ಲದೆ, ರಾಣಿಯ ಈ ವರ್ತನೆಯ ಬಗ್ಗೆ ಕೇಳಿಸಿಕೊಂಡ ಪರ್ಷಿಯ, ಮೇದ್ಯದೇಶಗಳ ಕುಲೀನ ಸ್ತ್ರೀಯರೂ ಇದೇ ರೀತಿ ಅರಸನ ಪದಾಧಿಕಾರಿಗಳೊಂದಿಗೆ ವರ್ತಿಸುವರು. ಹೀಗೆ ತಿರಸ್ಕಾರವೂ ಕೋಪವೂ ಉಂಟಾಗುವುದು. 19ಅರಸನು ಸಮ್ಮತಿಸುವುದಾದರೆ ವಷ್ಟಿರಾಣಿಯು ಅರಸನ ಸನ್ನಿಧಿಗೆ ಇನ್ನೆಂದೂ ಬಾರದಂತೆ ನಿಷೇಧಾಜ್ಞೆಯಾಗಬೇಕು. ಪಟ್ಟದರಸಿಯಾದ ಆಕೆಯ ಸ್ಥಾನವನ್ನು ಅವಳಿಗಿಂತಲೂ ಉತ್ತಮಳಾದ ಮತ್ತೊಬ್ಬಳಿಗೆ ಕೊಡಲಾಗುವುದು. ಈ ಬಗ್ಗೆ ರಾಜಾಜ್ಞೆಯೊಂದನ್ನು ಹೊರಡಿಸಿ ಅದು ರದ್ದಾಗದಂತೆ ಪರ್ಷಿಯ, ಮೇದ್ಯರ ಶಾಸನಗಳಲ್ಲಿ ಲಿಖಿತವಾಗಬೇಕು. 20ಅರಸನ ಈ ನಿರ್ಣಯವು ತನ್ನ ಸವಿಸ್ತಾರ ರಾಜ್ಯದಲ್ಲೆಲ್ಲಾ ಪ್ರಕಟವಾದಾಗ, ಹಿರಿಯರಿಂದ ಹಿಡಿದು ಕಿರಿಯರವರೆಗೂ ಎಲ್ಲಾ ಮಹಿಳೆಯರು ತಮ್ಮ ಗಂಡಂದಿರೊಂದಿಗೆ ಗೌರವದಿಂದ ವರ್ತಿಸುವರು", ಎಂದು ಸಲಹೆ ನೀಡಿದನು.

21 ಮೆಮೂಕನು ನೀಡಿದ ಈ ಸಲಹೆ ಅರಸನಿಗೂ ಪದಾಧಿಕಾರಿಗಳಿಗೂ ಸರಿಕಂಡು ಬಂತು. ಅರಸನು ಅದರಂತೆ ಮಾಡಿದನು. 22ಪ್ರತಿಯೊಂದು ಕುಟುಂಬದಲ್ಲೂ ಪುರುಷನೇ ಅಧಿಕಾರ ವಹಿಸಬೇಕು, ಅವನು ಸ್ವಜನರ ಭಾಷೆಯಲ್ಲೇ ವ್ಯವಹಾರ ನಡೆಸಬೇಕು ಎಂದು ತನ್ನ ಎಲ್ಲಾ ರಾಜಸಂಸ್ಥಾನಗಳಲ್ಲಿ ಪತ್ರಗಳ ಮುಖೇನ ಪ್ರಕಟಿಸಿದನು. ಇವು ಆಯಾ ಪ್ರಾಂತ್ಯಗಳ ಹಾಗೂ ಜನಸಾಮಾನ್ಯರ ಭಾಷೆಗಳಲ್ಲೂ ಬರೆಯಲಾದವು.

### ಎಸ್ತೇರಳಿಗೆ ರಾಣಿಪಟ್ಟ

**2** ಇದಾದ ಕೆಲವು ದಿನಗಳನಂತರ ಅರಸನ ಕೋಪವು ಶಾಂತವಾದಾಗ, ಅವನು ವಷ್ಟಿರಾಣಿಯನ್ನು, ಆಕೆಯ ವರ್ತನೆಯನ್ನು, ಆಕೆಯ ವಿರುದ್ಧ ತಾನು ನೀಡಿದ್ದ ತೀರ್ಪನ್ನು ಜ್ಞಾಪಿಸಿಕೊಂಡನು. 2ಅವನ ಸೇವೆ ಮಾಡುತ್ತಿದ್ದ ರಾಜ ಪರಿವಾರದವರು ಅವನಿಗೆ – "ಅರಸನಿಗೋಸ್ಕರ ಸುಂದರ ಕನ್ಯೆಯರನ್ನು ಹುಡುಕುವುದಕ್ಕೆ ಅಪ್ಪಣೆ ಆಗಬೇಕು. 3ಇದಕ್ಕಾಗಿ ರಾಜ್ಯದ ಎಲ್ಲಾ ಸಂಸ್ಥಾನಗಳಿಗೂ ಅಧಿಕಾರಿಗಳನ್ನು ಕಳುಹಿಸಬೇಕು. ಇವರು

ಸುರಸುಂದರಿಯರಾದ ಕನ್ಯೆಯರನ್ನೆಲ್ಲಾ ಶೂಷನ್ ನಗರಕ್ಕೆ ಕರೆತಂದು ಅಂತಃಪುರದಲ್ಲಿ ಸೇರಿಸಿ ಕೂಡಿಸಿ ಅಂತಃಪುರಪಾಲಕನೂ ರಾಜಕಂಚುಕಿಯೂ ಆದ ಹೇಗೈಯ ವಶಕ್ಕೆ ಒಪ್ಪಿಸಬೇಕು. ಇವನು ಅವರಿಗೆ ಸೌಂದರ್ಯ ವರ್ಧಕ ಸಾಧನಗಳನ್ನು, ಲೇಪನದ್ರವ್ಯಗಳನ್ನು ಕೊಡುವಂತೆ ವ್ಯವಸ್ಥೆ ಮಾಡಬೇಕು. 4ಯಾವ ಕನ್ಯೆಯು ಅರಸನಿಗೆ ಸುಪ್ರೀತಳಾಗಿ ಕಾಣುವಳೋ ಅವಳು ವಷ್ಟಿರಾಣಿಯ ಬದಲಾಗಿ ಪಟ್ಟದರಸಿ ಆಗಬೇಕು," ಎಂದು ಹೇಳಿದರು. ಅವರ ಈ ಸಲಹೆ ಅರಸನಿಗೆ ಸೂಕ್ತವೆಂದು ತೋರಿಬರಲು ಅವನು ಅದೇ ಪ್ರಕಾರ ಮಾಡಿದನು.

5 ಶೂಷನ್ ನಗರದಲ್ಲಿ ಮೊರ್ದೆಕೈ ಎಂಬ ಯೆಹೂದ್ಯನೊಬ್ಬನು ವಾಸಿಸುತ್ತಿದ್ದನು. ಇವನು ಬೆನ್ಯಾಮೀನ್ ಕುಲದ ಕೀಷನ ಮರಿಮಗನು, ಶಿಮ್ಗಿಯ ಮೊಮ್ಮಗನು, ಯಾಯೀರನ ಮಗನೂ ಆಗಿದ್ದನು. 6ಬಾಬಿಲೋನಿಯದ ಅರಸ ನೆಬೂಕದ್ನೆಚ್ಚರನಿಂದ ಸೆರೆಹಿಡಿಯಲಾದ ಯೆಹೂದ ಅರಸನಾದ ಯೆಕೋನ್ಯನ ಜೊತೆಗೆ ಜೆರುಸಲೇಮಿನಲ್ಲಿ ಸೆರೆಹಿಡಿಯಲಾದವರಲ್ಲಿ ಇವನೂ ಒಬ್ಬನಾಗಿದ್ದನು. 7ತಂದೆತಾಯಿಗಳನ್ನು ಕಳೆದುಕೊಂಡು ಅನಾಥಳಾಗಿದ್ದ ತನ್ನ ಚಿಕ್ಕಪ್ಪನ ಮಗಳಾದ ಎಸ್ತೇರಳನ್ನು (ಆಕೆಯ ಇನ್ನೊಂದು ಹೆಸರು ಹದೆಸ್ಸಾ) ತನ್ನ ಸ್ವಂತ ಮಗಳಂತೆ ಸ್ವೀಕರಿಸಿ ಸಾಕುತ್ತಿದ್ದನು. ಈಕೆ ಬಲು ರೂಪಸಿ ಹಾಗು ಲಾವಣ್ಯವತಿ ಆಗಿದ್ದಳು. 8ಅರಸನ ನಿರ್ಣಯದ ಪ್ರಕಾರ ರಾಜಾಜ್ಞೆಯು ಎಲ್ಲೆಡೆ ಪ್ರಕಟವಾಯಿತು. ಅನೇಕ ಮಂದಿ ಕನ್ಯೆಯರನ್ನು ಶೂಷನ್ ನಗರಕ್ಕೆ ಕರೆತಂದು ಅಂತಃಪುರಪಾಲಕನಾದ ಹೇಗೈಯನ ವಶಕ್ಕೆ ಒಪ್ಪಿಸಲಾಯಿತು. ಇಂಥವರಲ್ಲಿ ಎಸ್ತೇರಳೂ ಒಬ್ಬಳು. 9ಎಸ್ತೇರಳು ಹೇಗೈಯನ ಮೆಚ್ಚುಗೆಯನ್ನು ಗಳಿಸಿ ಅವನ ದಯೆಗೆ ಪಾತ್ರಳಾದಳು. ಈ ಕಾರಣದಿಂದ ಅವನು ಆಕೆಗೆ ತಕ್ಕ ಸೌಂದರ್ಯವರ್ಧಕ ಲೇಪನದ್ರವ್ಯಗಳನ್ನು ಹಾಗು ಉತ್ತಮ ಭೋಜನಾಂಶವನ್ನೂ ಕೊಟ್ಟು ಆಕೆಯನ್ನೂ ಆಕೆಯ ಸೇವೆಗೆ ಆರಿಸಿದ ಏಳುಮಂದಿ ದಾಸಿಯರನ್ನೂ ಅಂತಃಪುರದ ಉತ್ತಮ ಭಾಗದಲ್ಲಿರಿಸಿದನು. 10ತನ್ನ ಸ್ವಜನರ ಹಾಗೂ ಬಂಧು ಬಳಗದವರ ಬಗ್ಗೆ ಎಸ್ತೇರಳು ಯಾರಿಗೂ ತಿಳಿಸಿರಲಿಲ್ಲ. ತಿಳಿಸಬಾರದೆಂದು ಮೊರ್ದೆಕೈ ವಿಧಿಸಿದ್ದನು. 11ಎಸ್ತೇರಳ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳಲು ಮೊರ್ದೆಕೈ ಪ್ರತಿದಿನ ಅಂತಃಪುರದ ಅಂಗಳದ ಬಳಿ ಬಂದು ಹೋಗುತ್ತಿದ್ದನು.

12 ಕನ್ಯೆಯರ ಲೇಪನಕಾಲವು ಪೂರೈಸುವುದಕ್ಕೆ ಶ್ರೀಗಂಧ ತೈಲದ ಪ್ರಯೋಗದಲ್ಲಿ ಆರು ತಿಂಗಳು, ಹಾಗೂ ಕಾಂತಿವರ್ಧಕ ಪರಿಮಳ ದ್ರವ್ಯಗಳ ಪ್ರಯೋಗದಲ್ಲಿ ಆರು ತಿಂಗಳು ಹೀಗೆ ಒಂದು ವರ್ಷ ಕಳೆಯಿತು. ಇದಾದನಂತರ ಪದ್ಧತಿಯ ಪ್ರಕಾರ ಸಿಂಗರಿಸಿಕೊಂಡ ಪ್ರತಿಯೊಬ್ಬ ಕನ್ಯೆಯು ತನ್ನ ಸರದಿಯಂತೆ ಅರಸನ ಬಳಿಗೆ ಹೋಗಬೇಕಿದ್ದಿತ್ತು. 13ಹೀಗೆ ತನ್ನ ಸರದಿ ಬಂದಾಗ ತನ್ನೊಡನೆ ತೆಗೆದುಕೊಂಡು ಹೋಗಲು ಇಷ್ಟ ಪಡುವುದನ್ನೆಲ್ಲಾ ಆಕೆಗೆ ಒದಗಿಸಲಾಗುತ್ತಿತ್ತು. 14ಆಕೆ ರಾಜನಿವಾಸಕ್ಕೆ ಸಾಯಂಕಾಲ ಹೋದವಳು ಮಾರನೆಯ ದಿನ ಬೆಳಿಗ್ಗೆ ಅರಸನ ಉಪಪತ್ನಿಗಳ ಪಾಲಕನಾದ ಶವಷ್ಗಜನೆಂಬ ರಾಜ ಕಂಚುಕಿಯ ವಶದಲ್ಲಿದ್ದ ಎರಡನೆಯ ಅಂತಃಪುರಕ್ಕೆ ಬರುವಳು. ಅರಸನು ಅವಳನ್ನು ಬಯಸಿ ಅವಳ ಹೆಸರು ಹಿಡಿದು ಕರೆಕಳುಹಿಸಿದ ಹೊರತು ಅವಳು ಪುನಃ ಅರಸನ ಬಳಿಗೆ ಹೋಗುವಂತಿರಲಿಲ್ಲ.

15 ಹೀಗೆ ಅರಸನ ಬಳಿಗೆ ಹೋಗಲು ಮೊರ್ದೆಕೈಯ ದತ್ತುಮಗಳೂ ಅವನ ಚಿಕ್ಕಪ್ಪನಾದ ಅಬಿಹೈಲನ ಮಗಳೂ ಆದ ಎಸ್ತೇರಳ ಸರದಿ ಬಂದಾಗ ಅಂತಃಪುರದ ಪಾಲಕ ಹೇಗೈ ರಾಜಕಂಚುಕಿ ನೇಮಿಸಿದ್ದನ್ನೇ ಹೊರತು ಬೇರಾವುದನ್ನೂ ಆಕೆ ಕೇಳಲಿಲ್ಲ. ನೋಡಿದವರೆಲ್ಲರೂ ಆಕೆಯನ್ನು ಬಹುವಾಗಿ ಮೆಚ್ಚುತ್ತಿದ್ದರು. 16ಅರಸ ಅಹಷ್ವೇರೋಷನ ಆಳ್ವಿಕೆಯ ಏಳನೇ ವರ್ಷದ ಹತ್ತನೆ ತಿಂಗಳಾದ ಪುಷ್ಯ ಮಾಸದಲ್ಲಿ ('ತೇಬೆತ್' ಮಾಸದಲ್ಲಿ) ಆಕೆಯನ್ನು ಅರಸನ ಬಳಿಗೆ ಕರೆತರಲಾಯಿತು. 17ಅರಸನು, ಎಲ್ಲಾ ಸ್ತ್ರೀಯರಿಗಿಂತಲೂ ಹೆಚ್ಚಾಗಿ ಎಸ್ತೇರಳನ್ನೇ ಮೆಚ್ಚಿಕೊಂಡನು. ಎಲ್ಲ ಕನ್ಯೆಯರ ಪೈಕಿ ಆಕೆ ಅರಸನ ವಿಶೇಷ ದಯೆಗೂ ಪ್ರೀತಿಗೂ ಪಾತ್ರಳಾದಳು. ಈ ಕಾರಣ, ಅರಸನು ಆಕೆಯ ತಲೆಯ ಮೇಲೆ ರಾಜಮುಕುಟವನ್ನಿಟ್ಟು ವಷ್ಟಿರಾಣಿಗೆ ಬದಲಾಗಿ ಆಕೆಯನ್ನು ತನ್ನ ಪಟ್ಟದರಸಿಯನ್ನಾಗಿ ಆರಿಸಿಕೊಂಡನು. 18ತನ್ನ ಎಲ್ಲಾ ಪದಾಧಿಕಾರಿಗಳಿಗೂ ಪರಿವಾರದವರಿಗೂ ಎಸ್ತೇರಳ ಗೌರವಾರ್ಥವಾಗಿ ಒಂದು ಭಾರೀ ಔತಣವನ್ನು ಏರ್ಪಡಿಸಿದನು. ತನ್ನ ಎಲ್ಲಾ ಸಂಸ್ಥಾನಗಳಲ್ಲಿ, ಸೆರೆಯಲ್ಲಿದ್ದ ಬಂಧಿತರಿಗೆ ಬಿಡುಗಡೆಯನ್ನು ಘೋಷಿಸಿದನು. ರಾಜಮರ್ಯಾದೆಗೆ ತಕ್ಕಂತೆ ಪ್ರಜೆಗಳಿಗೆ ಉದಾರವಾಗಿ ದಾನಧರ್ಮಗಳನ್ನು ಮಾಡಿದನು.

## ರಾಜನ ಪ್ರಾಣರಕ್ಷಿಸಿದ ಮೊರ್ದೆಕೈ

19 ಕನ್ಯೆಯರನ್ನು ಎರಡನೆಯ ಸಾರಿ ಕುಳ್ಳಿರಿಸುವಾಗ, ಮೊರ್ದೆಕೈ ಅರಮನೆಯ ಹೆಬ್ಬಾಗಿಲಿನಲ್ಲಿ
ಕುಳಿತುಕೊಂಡಿದ್ದನು. 20ಮೊರ್ದೆಕೈಯ ಆದೇಶದಂತೆ ಎಸ್ತೇರಳು, ತನ್ನ ಬಂಧುಬಳಗದವರ ಬಗ್ಗೆಯಾಗಲಿ
ಸ್ವಜನರ ಬಗ್ಗೆಯಾಗಲಿ ಯಾರಿಗೂ ತಿಳಿಸಿರಲಿಲ್ಲ. ಮೊರ್ದೆಕೈಯ ಆರೈಕೆಯಲ್ಲಿದ್ದಾಗ ಆಕೆ ಯಾವ ರೀತಿ
ನಡೆದುಕೊಂಡಿದ್ದಳೋ ಹಾಗೆಯೆ ಪ್ರಸ್ತುತಕಾಲದಲ್ಲೂ ಆತನ ಆಜ್ಞೆಯನ್ನು ಪಾಲಿಸುತ್ತಿದ್ದಳು. 21ಆ ದಿನಗಳಲ್ಲಿ
ಮೊರ್ದೆಕೈ, ಎಂದಿನಂತೆ ಅರಮನೆಯ ಹೆಬ್ಬಾಗಿಲಿನಲ್ಲಿ ಕುಳಿತುಕೊಂಡಿದ್ದಾಗ ದ್ವಾರಪಾಲಕರಾದ ಬಿಗೆತಾನ್
ಮತ್ತು ತೆರೆಷ್ ಎಂಬಿಬ್ಬರು ರಾಜ ಕಂಚುಕಿಗಳು ಅರಸನ ವಿರುದ್ಧ ಕೈಯೆತ್ತಬೇಕೆಂದು ಒಳಸಂಚು
ಮಾಡಿದರು. 22ಈ ವಿಷಯ ಮೊರ್ದೆಕೈಗೆ ತಿಳಿದುಬಂದಾಗ, ಆತನು ಅದನ್ನು ಎಸ್ತೇರಳಿಗೆ ತಿಳಿಸಿದನು.
ರಾಣಿಯು ಅವನ ಹೆಸರನ್ನು ಅರಸನಿಗೆ ಹೇಳಿ ಅವರು ನಡೆಸುತ್ತಿದ್ದ ಆ ಪಿತೂರಿ ಬಗ್ಗೆ ತಿಳಿಸಿದಳು. 23ಈ
ವಿಷಯ ವಿಚಾರಣೆಗೆ ಬಂದು ಅದು ಸತ್ಯಸಂಗತಿಯೆಂದು ರುಜುವಾತಾಗಲು, ಆ ಇಬ್ಬರು ಪಿತೂರಿಗಾರರನ್ನು
ಗಲ್ಲಿಗೇರಿಸಲಾಯಿತು. ಆ ಸಂಗತಿಯನ್ನು ರಾಜನ ದಿನಚರಿಯ ಪುಸ್ತಕದಲ್ಲಿ ಬರೆದಿಡಲಾಯಿತು.

## ಯೆಹೂದ್ಯರ ದಮನಕ್ಕೆ ಹಾಮಾನನ ಯೋಜನೆ

**3** ಇದಾದನಂತರ ಅರಸ ಅಹಷ್ವೇರೋಷನು, ಆಗಾನನ ವಂಶದವನೂ ಹೆಮ್ಮೆದಾತನ ಮಗನೂ ಆದ
ಹಾಮಾನನನ್ನು ಉನ್ನತ ಪದವಿಗೇರಿಸಿ ಅವನನ್ನು ಹಿರಿಯ ಅಧಿಕಾರಿಯನ್ನಾಗಿ ಮಾಡಿ, ತನ್ನ ಎಲ್ಲಾ
ಪದಾಧಿಕಾರಿಗಳಲ್ಲಿ ಅವನಿಗೆ ಪ್ರಥಮ ಸ್ಥಾನವನ್ನು ಅನುಗ್ರಹಿಸಿದನು. 2ಅರಸನ ಆಜ್ಞಾನುಸಾರ
ಅರಮನೆಯಲ್ಲಿದ್ದ ಪರಿಚಾರಕರೆಲ್ಲರೂ ಅವನಿಗೆ ಅಡ್ಡಬಿದ್ದು ನಮಸ್ಕರಿಸುತ್ತಿದ್ದರು. ಆದರೆ ಮೊರ್ದೆಕೈ ಮಾತ್ರ
ಹಾಗೆ ಮಾಡುತ್ತಿರಲಿಲ್ಲ. 3ಇದನ್ನು ಗಮನಿಸಿದ ಅರಮನೆಯ ದ್ವಾರಪಾಲಕರು, "ನೀನು ಅರಸನ ಆಜ್ಞೆಯನ್ನು
ಮೀರುವುದೇಕೆ?" ಎಂದು ಮೊರ್ದೆಕೈಯನ್ನು ಕೇಳಿದರು. 4ಹೀಗೆ ಅವರು ಪ್ರತಿದಿನ ಅವನಿಗೆ ಹೇಳಿದರೂ
ಅವನು ಅವರ ಮಾತಿಗೆ ಕಿವಿಗೊಡಲಿಲ್ಲ. ತಾನು ಯೆಹೂದ್ಯನೆಂದು ಹೇಳಿಕೊಳ್ಳುತ್ತಿದ್ದ ಮೊರ್ದೆಕೈಯನ
ಹಟವು ಎಲ್ಲಿಯವರೆಗೆ ಸಾಗುವುದು ನೋಡಿಯೇ ಬಿಡಬೇಕೆಂದು ಅವನ ಈ ವರ್ತನೆಯ ಬಗ್ಗೆ
ಹಾಮಾನನಿಗೆ ದೂರು ಹೇಳಿದರು.

5 ಮೊರ್ದೆಕೈಯು ತನಗೆ, ಬಾಗಿ ನಮಸ್ಕಾರ ಮಾಡದೆ ಇದ್ದುದನ್ನು ಕಂಡು ಹಾಮಾನನು ಅವನ
ಮೇಲೆ ಕಡುಕೋಪಗೊಂಡನು. 6ಅವನು ಮೊರ್ದೆಕೈಯೊಬ್ಬನ ಮೇಲೆ ಕೈಮಾಡುವುದು ಸಾಲದೆಂದೆಣಿಸಿ,
ಇವನು ಯೆಹೂದ್ಯ ಜನಾಂಗದವನೆಂದು ಕೇಳಿದ ಮೇಲೆ, ಅಹಷ್ವೇರೋಷನ ರಾಜ್ಯದಲ್ಲಿದ್ದ ಇವನ
ಬಂಧುಬಳಗದವರನ್ನೆಲ್ಲಾ ಅಂದರೆ ಎಲ್ಲಾ ಯೆಹೂದ್ಯರನ್ನು ಸಂಹರಿಸಲು ತೀರ್ಮಾನಿಸಿದನು. 7ಅರಸ
ಅಹಷ್ವೇರೋಷನ ಆಳ್ವಿಕೆಯ ಹನ್ನೆರಡನೆಯ ವರ್ಷದ ಮೊದಲನೆಯ ತಿಂಗಳಾದ ಚೈತ್ರಮಾಸದಲ್ಲಿ
ಹಾಮಾನನ ಮುಂದೆ ಶುಭಮಾಸವೂ ಶುಭದಿನವೂ ಯಾವುದೆಂದು ತಿಳಿದುಕೊಳ್ಳಲು ಪೂರನ್ನು, ಅಂದರೆ
ಚೀಟನ್ನು ಹಾಕಲು, ಚೀಟು ಹನ್ನೆರಡನೆ ತಿಂಗಳಾದ ಫಾಲ್ಗುಣ ಮಾಸದ ಹದಿಮೂರನೆಯ ದಿನಕ್ಕೆ ಬಿದ್ದಿತ್ತು.
8ಹಾಮಾನನು ಅರಸ ಅಹಷ್ವೇ ರೋಷನಿಗೆ ಹೀಗೆಂದನು: "ನಿಮ್ಮ ರಾಜ್ಯದ ಎಲ್ಲಾ ಸಂಸ್ಥಾನಗಳಲ್ಲಿ ವಾಸಿಸುವ
ಒಂದು ಜನಾಂಗವಿದೆ. ಅದು ಇತರ ಜನಾಂಗಗಳ ಮಧ್ಯೆ ಹರಡಿಕೊಂಡಿದ್ದರೂ ತನ್ನ ರೀತಿನೀತಿಗಳಲ್ಲಿ
ಅವರಿಂದ ಪ್ರತ್ಯೇಕವಾಗಿಯೇ ಉಳಿಯುತ್ತದೆ. ಅರಸನ ನಿಯಮಗಳನ್ನಂತೂ ಈ ಜನಾಂಗದವರು
ಅನುಸರಿಸುವುದೇ ಇಲ್ಲ. ಹೀಗಿರುವಲ್ಲಿ ಇಂಥವರನ್ನು ಅರಸರು ಸುಮ್ಮನೆ ಬಿಡುವುದು ಸರಿಯಲ್ಲ. 9ಅರಸರಿಗೆ
ಸಮ್ಮತಿಯಾದರೆ ಅವರನ್ನು ನಿರ್ಮೂಲ ಮಾಡುವಂತೆ ಆಜ್ಞೆಯೊಂದನ್ನು ಹೊರಡಿಸಬೇಕು. ಹಾಗೆ
ಮಾಡಿದ್ದಲ್ಲಿ, ನಾನು ರಾಜಭಂಡಾರಕ್ಕಾಗಿ 340,000 ಕಿಲೋಗ್ರಾಮ್ ಬೆಳ್ಳಿಯನ್ನು ಉದ್ಯೋಗಸ್ಥರ ಕೈಗೆ
ಒಪ್ಪಿಸುವೆನು," ಎಂದು ಹೇಳಿದನು. 10ಇದನ್ನು ಕೇಳಿದ ಅರಸನು ತನ್ನ ಕೈಬೆರಳಿನಲ್ಲಿದ್ದ
ಮುದ್ರೆಯುಂಗುರವನ್ನು ತೆಗೆದು, ಆಗಾನನ ವಂಶಸ್ಥನೂ ಹೆಮ್ಮೆದಾತನ ಮಗನೂ ಯೆಹೂದ್ಯರ
ಕಡುವೈರಿಯೂ ಆದ ಹಾಮಾನನಿಗೆ ಕೊಟ್ಟು, 11"ಆ ಬೆಳ್ಳಿ ನಿನ್ನಲ್ಲೇ ಇರಲಿ; ಆ ಜನರಿಗಾದರೋ ನಿನಗೆ
ಉಚಿತವೆಂದು ಕಂಡುಬಂದ ರೀತಿಯಲ್ಲಿ ನೀನು ಮಾಡಬಹುದು," ಎಂದು ಹೇಳಿದನು.

12 ಮೊದಲನೇ ತಿಂಗಳ ಹದಿಮೂರನೆಯ ದಿನ ರಾಜಲೇಖಕರನ್ನು ಕರೆಸಲಾಯಿತು. ಇವರು
ಹಾಮಾನನ ಆಜ್ಞಾನುಸಾರ ಉಪರಾಜರಿಗೂ ಆಯಾ ಸಂಸ್ಥಾನಾಧಿಕಾರಿಗಳಿಗೂ, ಆಯಾ ಜನಾಂಗಗಳ
ಅಧಿಪತಿಗಳಿಗೂ ಪತ್ರಗಳನ್ನು ಅವರವರ ಸ್ವದೇಶಿ ಲಿಪಿಗಳಲ್ಲೂ ಭಾಷೆಗಳಲ್ಲೂ ಬರೆದರು. ಅರಸ
ಅಹಷ್ವೇರೋಷನ ಹೆಸರಿನಲ್ಲೇ ಲಿಖಿತವಾದ ಈ ಪತ್ರಗಳು ಅಧಿಕೃತ ರಾಜಮುದ್ರೆಯನ್ನು ಹೊಂದಿದ್ದವು.
13ಪತ್ರಗಳನ್ನು ಅಂಚೆಯವರ ಮುಖಾಂತರ ಎಲ್ಲಾ ರಾಜ ಸಂಸ್ಥಾನಗಳಿಗೆ ಕಳುಹಿಸಲಾಯಿತು. ಒಂದೇ
ದಿನದಲ್ಲಿ ಅಂದರೆ, ಹನ್ನೆರಡನೆಯ ತಿಂಗಳಾದ ಫಾಲ್ಗುಣ ಮಾಸದ ಹದಿಮೂರನೆಯ ದಿನದಲ್ಲಿ ಹಿರಿಯರು,
ಕಿರಿಯರು, ಮಕ್ಕಳು, ಮಹಿಳೆಯರೆನ್ನದೆ ನಿಮ್ಮ ಮಧ್ಯೆ ವಾಸಿಸುವ ಎಲ್ಲಾ ಯೆಹೂದ್ಯರನ್ನು ಕೊಂದುಹಾಕಿ,
ನಿರ್ಮೂಲಮಾಡಿ, ನಿರ್ನಾಮಗೊಳಿಸಬೇಕೆಂದು ಅದರಲ್ಲಿ ಬರೆಯಲಾಗಿತ್ತು. 14ಅವರ ಆಸ್ತಿಯನ್ನು ಕೊಳ್ಳೆ
ಹೊಡೆಯಬೇಕೆಂದು ಅದರಲ್ಲಿ ತಿಳಿಸಲಾಗಿತ್ತು.

### ಮೇಲ್ಕಂಡ ಪತ್ರದ ನಕಲು ಇದು:

**೨** "ಭಾರತ (ಇಂಡಿಯಾ) ದೇಶದಿಂದ ಮೊದಲುಗೊಂಡು ಇಥಿಯೋಪಿಯಾ ದೇಶದವರೆಗೆ ವಿಸ್ತರಿಸಿರುವ
127 ಪ್ರಾಂತ್ಯಗಳ ಅಧಿಪತಿಗಳಿಗೂ ಅವರ ಕೈಕೆಳಗಿರುವ ಅಧಿಕಾರಿಗಳಿಗೂ ಅಹಷ್ವೇರೋಷ ಮಹಾರಾಜ ಪತ್ರ
ಬರೆದು ತಿಳಿಸುವುದೇನೆಂದರೆ:
2 "ನಾನು ಹಲವಾರು ರಾಷ್ಟ್ರಗಳನ್ನು ಜಯಿಸಿ ಲೋಕಾಧಿಪತಿಯಾಗಿದ್ದರೂ ನನ್ನ ಪ್ರಜೆಗಳು
ಶಾಂತಿಯಿಂದ ಬಾಳಬೇಕೆಂದು ನಿರ್ಧರಿಸಿದ್ದೇನೆ. ಈ ನಿರ್ಧಾರವನ್ನು ಕೈಗೊಂಡಿದ್ದು ಅಧಿಕಾರದ
ವ್ಯಾಮೋಹದಿಂದಲ್ಲ. ಪ್ರಜೆಗಳನ್ನು ನ್ಯಾಯದಿಂದಲೂ ಕರುಣೆಯಿಂದಲೂ ಪರಿಪಾಲಿಸಬೇಕೆಂಬ
ಬಯಕೆಯಿಂದ; ನನ್ನ ರಾಜ್ಯದಲ್ಲಿ ಇರುವ ಪ್ರಜೆಗಳು ಸುಕ್ಷೇಮದಿಂದ ಬಾಳಬೇಕು; ನನ್ನ ರಾಜ್ಯದಲ್ಲಿ ಶಾಂತಿ
ಸಮಾಧಾನ ನೆಲೆಯಾಗಿ ಇರಬೇಕು; ಪ್ರಯಾಣಿಕರು ಎಲ್ಲೆಡೆ ನಿರ್ಭೀತಿಯಿಂದ ಸಂಚರಿಸುವಂತಿರಬೇಕು;
ಎಲ್ಲರೂ ಬಯಸುವ ನೆಮ್ಮದಿ ನಮ್ಮ ರಾಜ್ಯದಲ್ಲಿ ಪುನರ್ ಸ್ಥಾಪಿತವಾಗಬೇಕು.
3 "ನನ್ನ ಈ ನಿರ್ಧಾರವನ್ನು ಹೇಗೆ ಕಾರ್ಯರೂಪಕ್ಕೆ ತರುವುದು ಎಂದು ನನ್ನ ಸಲಹೆಗಾರರೊಡನೆ
ಸಮಾಲೋಚಿಸಿದೆ. 4ಸೂಕ್ತವಾದ ಸಲಹೆ ನೀಡುವುದರಲ್ಲಿ ಅತಿ ನಿಪುಣನು, ವಿವೇಕಿಯು, ಪ್ರಾಮಾಣಿಕಸ್ಥನು
ಎಂದು ಹೆಸರುವಾಸಿಯಾದ ಹಾಗು ನನ್ನ ರಾಜ್ಯದಲ್ಲೇ ದ್ವಿತೀಯ ಸ್ಥಾನವನ್ನು ಅಲಂಕರಿಸಿರುವ ಹಾಮಾನನು:
'ಲೋಕದ ಎಲ್ಲಾ ರಾಜ್ಯಗಳ ಮಧ್ಯೆ ಹರಡಿದ್ದರೂ ಅವುಗಳಿಂದ ಪ್ರತ್ಯೇಕವಾಗಿಯೇ ಉಳಿದಿರುವ ಒಂದು
ಜನಾಂಗ ಇದೆ. ಇತರ ಜನಾಂಗಗಳವರ ನೀತಿ ನಿಯಮಗಳಿಗೆ ವ್ಯತಿರಿಕ್ತವಾದವುಗಳನ್ನು ಈ ಜನಾಂಗ
ಅನುಸರಿಸುತ್ತದೆ. ಅರಸನ ಆಜ್ಞೆಗಳನ್ನಂತೂ ಅದು ನಿರಂತರವಾಗಿ ಉಲ್ಲಂಘಿಸುತ್ತಾ ಬರುತ್ತಿದೆ. ಇದರಿಂದಾಗಿ,
ನಾವೆಲ್ಲರು ಬಹುವಾಗಿ ಅಪೇಕ್ಷಿಸುತ್ತಿರುವ ರಾಜ್ಯದ ಸುಭದ್ರತೆಯನ್ನು ಕಾಪಾಡಲು ಮಾಡುವ ಪ್ರಯತ್ನಗಳೆಲ್ಲ
ವಿಫಲವಾಗುತ್ತಿವೆ,' ಎಂದು ತಿಳಿಸಿದನು.
5 "ಈ ವಿಚಿತ್ರವಾದ ಜನರು ಇಡೀ ಮಾನವ ಕುಲಕ್ಕೆ ವಿರೋಧವಾಗಿದ್ದು, ಪ್ರತ್ಯೇಕವಾದ
ನಿಯಮಗಳನ್ನು ಪಾಲಿಸುತ್ತಾರೆ. ಇವರು ನಿಜಕ್ಕೂ ದೇಶದ್ರೋಹಿಗಳು, ಅಕ್ರಮಿಗಳು, ನಮ್ಮ ರಾಜ್ಯದ
ಸುಭದ್ರತೆಗೆ ಮಾರಕವಾದವರು. 6ಈ ಕಾರಣದಿಂದ, ನಮ್ಮ ಪ್ರಧಾನ ಮಂತ್ರಿಯಾದ ಹಾಮಾನನು
ಸೂಚಿಸಿರುವ ಈ ದುಷ್ಟ ಜನರನ್ನು ಒಂದೇ ದಿನದಲ್ಲಿ, ಅಂದರೆ ಹನ್ನೆರಡನೇ ತಿಂಗಳಾದ ಫಾಲ್ಗುಣ ಮಾಸದ
ಹದಿಮೂರನೇ ದಿನದಲ್ಲಿ, ಹೆಂಗಸರು ಮಕ್ಕಳು ಎನ್ನದೆ, ಈ ಎಲ್ಲಾ ಯೆಹೂದ್ಯರನ್ನು ದಯೆದಾಕ್ಷಿಣ್ಯವಿಲ್ಲದೆ
ಕತ್ತಿಯಿಂದ ಸಂಹರಿಸಬೇಕು. 7ಇಷ್ಟು ದೀರ್ಘ ಕಾಲದವರೆಗೆ ಹೇಯವಾದ ದುಷ್ಕೃತ್ಯಗಳನ್ನು ಎಸಗುತ್ತಾ
ಬಂದಿರುವ ಈ ಜನರು ಒಂದೇ ದಿನದಲ್ಲಿ ಕ್ರೂರವಾಗಿ ಹತರಾಗಬೇಕು. ತತ್ಪರಿಣಾಮವಾಗಿ ನಮ್ಮ ರಾಜ್ಯ
ಇನ್ನು ಮುಂದೆ ಸುಭದ್ರವೂ ಸುರಕ್ಷಿತವೂ ಆಗುವುದು."

**3** 14ಮೇಲ್ಕಂಡ ಪತ್ರವನ್ನು, ಎಲ್ಲರೂ ಆ ದಿನಕ್ಕೆ ಸಿದ್ಧರಾಗಿರುವಂತೆ, ಪ್ರತಿಯೊಂದು ಸಂಸ್ಥಾನದಲ್ಲೂ
ರಾಜಾಜ್ಞೆಯಂತೆ ಪ್ರಕಟಿಸಲಾಯಿತು. 15ಈ ನಿರ್ಣಯವು ಶೂಷನ್ ಅರಮನೆಯಲ್ಲಿ ಪ್ರಕಟವಾದ ಕೂಡಲೆ

ಅಂಚೆಯವರು ರಾಜಾಜ್ಞೆಯ ಮೇರೆಗೆ ತ್ವರಿತವಾಗಿ ಹೊರಟರು. ಅರಸನಾದರೋ ಹಾಮಾನನೊಡನೆ ಮದ್ಯಪಾನ ಮಾಡಲು ಕುಳಿತುಕೊಂಡಿದ್ದನು. ಅತ್ತ ಶೂಷನ್ ನಗರದಲ್ಲಿ ಎಲ್ಲೆಲ್ಲೂ ತಳಮಳವುಂಟಾಯಿತು.

## ಎಸ್ತೇರಳ ಸಹಾಯಕ್ಕಾಗಿ ಮೊರ್ದೆಕೈಯನ ವಿನಂತಿ

**4** ನಡೆದ ಸಂಗತಿಯನ್ನೆಲ್ಲಾ ಕೇಳಿದಾಗ, ಮೊರ್ದೆಕೈ ಸಿಟ್ಟಿನಿಂದ ತನ್ನ ಬಟ್ಟೆಗಳನ್ನು ಹರಿದು, ಗೋಣಿತಟ್ಟನ್ನು ಉಟ್ಟು, ಬೂದಿಯನ್ನು ಸುರಿದುಕೊಂಡು ನಗರದ ಮಧ್ಯೆ ಹೋಗುತ್ತಾ ಅಪಾರ ದುಃಖದಿಂದ ಗೋಳಾಡಿದನು. 2ಅದೇ ಸ್ಥಿತಿಯಲ್ಲಿ ಅರಮನೆಯ ಹೆಬ್ಬಾಗಿಲವರೆಗೂ ಬಂದನು. ಗೋಣಿತಟ್ಟನ್ನು ಉಟ್ಟವರು ಯಾರೂ ಒಳಗೆ ಪ್ರವೇಶಿಸಕೂಡದೆಂಬ ನಿಷೇಧಾಜ್ಞೆ ಜಾರಿಯಲ್ಲಿ ಇತ್ತು. 3ಅರಸನ ಆಜ್ಞೆಯೂ ನಿರ್ಣಯವೂ ಪ್ರಕಟವಾದ ಸಂಸ್ಥಾನಗಳಲ್ಲೆಲ್ಲಾ ಯೆಹೂದ್ಯರೊಳಗೆ ಅತೀವ ದುಃಖವುಂಟಾಗಿ ಅನೇಕರು ಉಪವಾಸಕೈಗೊಂಡು ರೋಧನ ಆಕ್ರಂದನಗಳೊಡನೆ ಗೋಣಿತಟ್ಟನ್ನು ಹೊದ್ದು ಬೂದಿಯಲ್ಲಿ ಕುಳಿತುಕೊಂಡರು.

4 ಎಸ್ತೇರಳ ದಾಸಿಯರೂ ಕಂಚುಕಿಗಳೂ ಈ ವಿಷಯವನ್ನು ಆಕೆಗೆ ತಿಳಿಸಿದಾಗ ಆಕೆ ಬಹು ವ್ಯಸನಕ್ರಾಂತಳಾದಳು. ಉಟ್ಟ ಗೋಣಿತಟ್ಟನ್ನು ತೆಗೆದುಹಾಕಿ, ವಸ್ತ್ರಗಳನ್ನು ಧರಿಸಿಕೊಳ್ಳುವಂತೆ ಮೊರ್ದೆಕೈನಿಗೆ ಉಡುಪನ್ನು ಕಳುಹಿಸಿಕೊಟ್ಟಳು. ಅವನಾದರೋ ಅವುಗಳನ್ನು ಸ್ವೀಕರಿಸಲಿಲ್ಲ. 5ಆಗ ಎಸ್ತೇರಳು ತನ್ನ ಸೇವೆಗಾಗಿ ನೇಮಿಸಲಾಗಿದ್ದ ರಾಜಕಂಚುಕಿಗಳಲ್ಲಿ ಒಬ್ಬನಾದ ಹತಾಕನನ್ನು ಕರೆದು, ಮೊರ್ದೆಕೈ ಬಳಿಗೆ ಕಳುಹಿಸಿ, ನಡೆದ ಸಂಗತಿ ಏನೆಂದೂ ಮೊರ್ದೆಕೈಯನ ಈ ವರ್ತನೆಗೆ ಕಾರಣವಾದರೂ ಯಾವುದೆಂದೂ ವಿಚಾರಿಸಿಕೊಂಡು ಬರುವಂತೆ ಹೇಳಿದಳು. 6ಅಂತೆಯೆ, ಹತಾಕನು ಅರಮನೆಯ ಹೆಬ್ಬಾಗಿಲ ಮುಂದಿರುವ ನಗರದ ಬಯಲಿಗೆ, ಮೊರ್ದೆಕೈಯನ ಬಳಿಗೆ ಹೋದಾಗ, ಅವನು, ನಡೆದ ಎಲ್ಲಾ ವಿಷಯಗಳನ್ನು ಹಾಗು, 7ಯೆಹೂದ್ಯರನ್ನು ನಾಶಮಾಡಲು ಅನುಮತಿ ಪಡೆದುಕೊಳ್ಳುವುದಕ್ಕಾಗಿ ಹಾಮಾನನು ರಾಜಭಂಡಾರಕ್ಕೆ ಕೊಡಲು ವಾಗ್ದಾನ ಮಾಡಿದ ನಿಗದಿತ ಹಣದ ವಿಷಯವನ್ನು ಅವನಿಗೆ ವಿವರಿಸಿ ಹೇಳಿದನು. 8ಅಲ್ಲದೆ ಯೆಹೂದ್ಯರನ್ನೆಲ್ಲಾ ಸಂಹರಿಸಿಬಿಡುವುದಕ್ಕೋಸ್ಕರ ಶೂಷನ್ ನಗರದಲ್ಲಿ ಪ್ರಕಟಗೊಂಡ ರಾಜಶಾಸನದ ಒಂದು ಪ್ರತಿಯನ್ನು ಅವನ ಕೈಗಿತ್ತು ಅದನ್ನು ಎಸ್ತೇರಳಿಗೆ ತೋರಿಸಿ ವಿವರಿಸುವಂತೆಯೂ ಆಕೆ ಅರಸನ ಸಮ್ಮುಖಕ್ಕೆ ಹೋಗಿ, ಆತನು ದಯೆತೋರುವಂತೆ ಆತನ ಸನ್ನಿಧಿಯಲ್ಲಿ ತನ್ನ ಜನರಿಗೋಸ್ಕರ ಬಿನ್ನಹ ಮಾಡುವಂತೆ ಆಕೆಗೆ ತಿಳಿಸಬೇಕೆಂತಲೂ ಹೇಳಿಕಳುಹಿಸಿದನು.

9 ಹತಾಕನು ಎಸ್ತೇರಳ ಬಳಿಗೆ ಹಿಂದಿರುಗಿ ಆಕೆಗೆ ಮೊರ್ದೆಕೈ ಹೇಳಿದ ಎಲ್ಲಾ ಮಾತುಗಳನ್ನು ತಿಳಿಸಿದನು. 10ಎಸ್ತೇರಳು ಮತ್ತೊಮ್ಮೆ, ಅವನನ್ನು ಮೊರ್ದೆಕೈಯನ ಬಳಿಗೆ ಕಳುಹಿಸಿ, 11"ಅರಸನು ಹೇಳಿಕಳುಹಿಸಿದ ಹೊರತು ಅವನ ಬಳಿಗೆ ಅರಮನೆಯ ಒಳಾಂಗಣಕ್ಕೆ ಹೋಗುವವರು ಮರಣದಂಡನೆಗೆ ಗುರಿಯಾಗುವರು ಎಂಬ ನಿಷೇಧಾಜ್ಞೆಯು ಸ್ತ್ರೀಪುರುಷರೆನ್ನದೆ ಎಲ್ಲರಿಗೂ ಅನ್ವಯಿಸುತ್ತದೆ. ಯಾರ ಕಡೆಗೆ ಅವನು ತನ್ನ ಸ್ವರ್ಣದಂಡವನ್ನು ಚಾಚುವನೋ ಅವರು ಮಾತ್ರ ಜೀವದಿಂದುಳಿಯುತ್ತಾರೆ. ಇದು ಅರಸನ ಎಲ್ಲಾ ಸೇವಕರಿಗೂ ಸಂಸ್ಥಾನಗಳ ಎಲ್ಲಾ ನಿವಾಸಿಗಳಿಗೂ ತಿಳಿದಿದೆಯಲ್ಲವೆ; ನನಗಂತೂ ಕಳೆದ ಮೂವತ್ತು ದಿನಗಳಿಂದ ಅರಸನ ಬಳಿಗೆ ಹೋಗುವುದಕ್ಕೆ ಆಮಂತ್ರಣವೇ ಬರಲಿಲ್ಲ," ಎಂದು ತಿಳಿಸುವಂತೆ ಹೇಳಿದಳು.

12 ಹತಾಕನು, ಎಸ್ತೇರಳ ಈ ಸಂದೇಶವನ್ನು ಮೊರ್ದೆಕೈಗೆ ತಿಳಿಸಲು ಅವನು ಪುನಃ ಎಸ್ತೇರಳಿಗೆ, 13 "ನೀನು ಅರಮನೆಯಲ್ಲಿದ್ದ ಮಾತ್ರಕ್ಕೆ ಯೆಹೂದ್ಯರೆಲ್ಲರು ನಾಶವಾದರೂ ನೀನೊಬ್ಬಳು ಮಾತ್ರ ಉಳಿದು ಕೊಳ್ಳುವಿಯೆಂದು ಭಾವಿಸಬೇಡ; 14ನೀನೀಗ ಸುಮ್ಮನಿದ್ದುಬಿಟ್ಟರೆ ಬೇರಾವ ಕಡೆಯಿಂದ ಯೆಹೂದ್ಯರಿಗೆ ಸಹಾಯವೂ ವಿಮೋಚನೆಯೂ ಉಂಟಾದಾವು? ನೀನಾದರೋ ನಿನ್ನ ತಂದೆಯ ಮನೆಯವರೊಡನೆ ನಾಶವಾಗಿ ಹೋಗುವೆ. ಇದಲ್ಲದೆ ಇಂಥ ಸಂದರ್ಭಕ್ಕಾಗಿಯೇ ನೀನು ಪಟ್ಟಕ್ಕೆ ಬಂದಿರಬಹುದು, ಯಾರು ಬಲ್ಲರು?" ಎಂದು ಹೇಳಿಕಳುಹಿಸಿದನು. 15–16ಆಗ ಎಸ್ತೇರಳು ಮೊರ್ದೆಕೈಯನಿಗೆ, "ನೀನು ಹೋಗಿ ಶೂಷನ್ ನಗರದಲ್ಲಿರುವ ಯೆಹೂದ್ಯರನ್ನೆಲ್ಲಾ ಸಭೆ ಸೇರಿಸು. ಎಲ್ಲರೂ ಹಗಲಿರುಳು ಎನ್ನದೆ ಮೂರು ದಿನ ಅನ್ನಪಾನಗಳನ್ನು ತೊರೆದು ನನಗೋಸ್ಕರ ಉಪವಾಸವನ್ನು ಕೈಗೊಳ್ಳಲಿ. ನನ್ನ ದಾಸಿಯರೊಡನೆ ನಾನೂ

ಉಪವಾಸ ಕೈಗೊಳ್ಳುವೆನು. ಅನಂತರ ಅರಸನ ಆಜ್ಞೆಯನ್ನು ಮೀರಿ ಆದರೂ ನಾನು ಆತನ ಬಳಿಗೆ ಹೋಗುವೆನು; ಸತ್ತರೂ ಸಾಯುವೆನು," ಎಂದು ಹೇಳಿಕಳುಹಿಸಿದಳು. 17ಮೊರ್ದೆಕೈ ಹಿಂದಿರುಗಿ ಹೋಗಿ ಎಸ್ತೇರಳು ಹೇಳಿದಂತೆಯೇ ಮಾಡಿದನು.

## ಮೊರ್ದೆಕೈ ಮಾಡಿದ ಪ್ರಾರ್ಥನೆ

**೩** ಸರ್ವೇಶ್ವರಸ್ವಾಮಿಯ ಅದ್ಭುತ ಕಾರ್ಯಗಳನ್ನು ನೆನಸಿಕೊಂಡು, ಮೊರ್ದೆಕೈ ಹೀಗೆಂದು ಪ್ರಾರ್ಥಿಸಿದನು:

2 ಸರ್ವೇಶ್ವರಾ, ಸಕಲಕ್ಕೂ ಒಡೆಯನಾದ
ದೇವರೇ,
ಸರ್ವಸೃಷ್ಟಿಯೂ ತಮಗೆ ಅಧೀನವಾಗಿದೆ,
ಪ್ರತಿಭಟಿಸುವವರೇ ಇಲ್ಲ,
ಇಸ್ರಯೇಲನ್ನು ರಕ್ಷಿಸಲು ನಿರ್ಧರಿಸುವ
ತಮಗೆ.
3 ಭೂಪರಗಳನ್ನುಂಟುಮಾಡಿದವರೂ ತಾವೇ
ಎಲ್ಲಾ ಅತಿಶಯ ಸೃಷ್ಟಿಗಳನ್ನು
ನಿರ್ಮಿಸಿದವರೂ ತಾವೇ,
ವಿಶ್ವಕ್ಕೆಲ್ಲ ಒಡೆಯರು ತಾವೊಬ್ಬರೇ,
ಸರ್ವೇಶ್ವರಾ, ಪ್ರತಿಭಟಿಸುವವರಿಲ್ಲ ತಮಗೆ.
4 ಸರ್ವೇಶ್ವರಾ, ಸರ್ವಜ್ಞಾನ ಸಂಪನ್ನರೇ,
ನಾ ಮಣಿಯಲು ನಿರಾಕರಿಸಿದೆ ಗರ್ವಿಯಾದ
ಹಾಮಾನನಿಗೆ.
5 ನಾ ಮಾಡಿದ್ದು ಗರ್ವ, ಹೆಮ್ಮೆ, ಅಧಿಕಾರ
ವ್ಯಾಮೋಹದಿಂದಲ್ಲವೆಂದು ತಮಗೆ ತಿಳಿದಿದೆ.
ಇಸ್ರಯೇಲರಿಗೆ ಸಂರಕ್ಷಣೆ ದೊರಕಿತ್ತಾದರೆ
ಸಂತೋಷದಿಂದ ನಾನು ಮುತ್ತಿಡುತ್ತಿದ್ದೆ ಅವನ
ಪಾದಕೆ.
6 ಈ ಪರಿ ನಾ ವರ್ತಿಸಲು ಕಾರಣ ಒಂದೇ:
ಮಾನವ ಗೌರವಕ್ಕಿಂತ ಅತಿ ಮುಖ್ಯ ದೇವರ
ಮಹಿಮೆ.
7 ದೇವಾ, ತಮಗಲ್ಲದೆ ಇನ್ನಾರಿಗೂ ಸಲ್ಲಿಸಲಾರೆ
ಆರಾಧನೆ
ಅಹಂಕಾರದಿಂದ ಪ್ರೇರಿತವಾದುದಲ್ಲ
ನನ್ನೀ ವರ್ತನೆ.
8 ಹೇ ದೇವರಾದ ಸರ್ವೇಶ್ವರಾ,
ಅರಸನೇ, ಅಬ್ರಹಾಮನ ದೇವಾ,
ಕಾಪಾಡಿ ನಿಮ್ಮೀ ಪ್ರಜೆಗಳ.
9 ಪಿತೂರಿ ಮಾಡಿಹರು ನಮ್ಮನ್ನು
ನಾಶಗೊಳಿಸಲು
ಹವಣಿಸಿಹರು ಪೂರ್ವಜರ ಸೊತ್ತನ್ನು
ಕಬಳಿಸಲು.

10 ನಿರ್ಲಕ್ಷಿಸಬೇಡಿ ತಮ್ಮ ಸ್ವಂತ ಸೊತ್ತನ್ನು
ಈಜಿಪ್ಟಿನಿಂದ ತಾವೇ ಸ್ವತಃ
ವಿಮೋಚಿಸಿದವರನ್ನು.
ಆಲಿಸಿ ನನ್ನೀ ಪ್ರಾರ್ಥನೆ, ದಯೆತೋರಿ ತಮ್ಮ
ಪ್ರಜೆಗೆ
ನಮ್ಮ ದುಃಖವ ನೀಗಿಸಿ ಉಪಶಮನವನು
ನೀಡೆಮಗೆ.
ಈ ಪರಿ, ನಾವು ತಮ್ಮ ನಾಮವನ್ನು ಕೀರ್ತಿಸು
ವಂತೆ ಮಾಡಿ
ತಮ್ಮ ಸ್ತುತಿಮಾಡುವ ಜನರು ಅಳಿಯದಂತೆ
ಕಾಪಾಡಿ.

11 ಇಸ್ರಯೇಲಿನ ಜನರೆಲ್ಲರು ತಮ್ಮ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ದೇವರಿಗೆ ಮೊರೆ ಇಟ್ಟರು; ಏಕೆಂದರೆ, ಮರಣಭಯದಿಂದ ಅವರು ತತ್ತರಿಸಿಹೋಗಿದ್ದರು.

**ಎಸ್ತೇರಳ ಪ್ರಾರ್ಥನೆ**

12 ಮರಣಭಯದಿಂದ ಕಂಗೆಟ್ಟ ರಾಣಿ ಎಸ್ತೇರಳು ಸರ್ವೇಶ್ವರನ ಆಶ್ರಯವನ್ನು ಕೋರಿದಳು. 13ತನ್ನ ಆಡಂಬರದ ಉಡುಗೆತೊಡುಗೆಯನ್ನು ತೆಗೆದಿಟ್ಟುಕೊಂಡಳು. ಅಮೂಲ್ಯ ಸುಗಂಧ ದ್ರವ್ಯಗಳ ಬದಲು ಧೂಳನ್ನೂ ಬೂದಿಯನ್ನೂ ತಲೆಗೆ ಹಚ್ಚಿಕೊಂಡಳು. 14ಕಠಿಣವಾದ ದೇಹ ದಂಡನೆಯಿಂದ ಕುಗ್ಗಿ ಹೋದಳು. ಗೆಲುವಿನ ವಸ್ತ್ರಾಭರಣಗಳನ್ನು ಬದಿಗಿತ್ತು, ಶೋಕತಪ್ತಳಾಗಿ ಕೂದಲನ್ನು ಬಿಟ್ಟುಕೊಂಡಳು. ಇಸ್ರಯೇಲರ ದೇವರಾದ ಸರ್ವೇಶ್ವರನಿಗೆ ಪ್ರಾರ್ಥನೆಮಾಡುತ್ತಾ ಈ ಪರಿ ಮೊರೆಯಿಟ್ಟಳು:

15 ನನ್ನ ಸರ್ವೇಶ್ವರಾ, ಅರಸನೇ, ತಾವೊಬ್ಬರೇ
ದೇವರು
ಒಬ್ಬಂಟಿಗಳು ನಾನು, ತಾವೇ ನನಗೆ ನೆರವು.
ನನ್ನ ಪ್ರಾಣಕ್ಕೆ ಗಂಡಾಂತರ ಬಂದಿಹ
ಈ ವೇಳೆಯಲಿ
ತಮ್ಮನ್ನಲ್ಲದೆ, ಯಾರನ್ನು ಆಶ್ರಯಿಸಲಿ?
16 ತಾವಾರಿಸಿಕೊಂಡಿರಿ ಸಕಲ ರಾಷ್ಟ್ರಗಳಿಂದ
ಇಸ್ರಯೇಲನ್ನು
ತಮ್ಮ ಪ್ರಜೆಯಾಗಲು ಪ್ರತ್ಯೇಕಿಸಿದಿರಿ,
ನಮ್ಮ ಪೂರ್ವಜರನ್ನು.
ತಪ್ಪದೆ ಈಡೇರಿಸಿದಿರಿ ತಮ್ಮ ವಾಗ್ದಾನಗಳನ್ನು
ಕುಟುಂಬದವರಿಂದ ಬಾಲ್ಯದಿಂದಲೇ
ನಾ ಕಲಿತ ಈ ಪಾಠವನ್ನು.
17 ಪಾಪಮಾಡಿದೆವು, ನಾವು ದ್ರೋಹವೆಸಗಿದೆವು
ತಮಗೆ
ಪೂಜೆಯನು ಸಲ್ಲಿಸಿದೆವು ಅನ್ಯ ದೇವರುಗಳಿಗೆ
ಎಂತಲೆ, ಒಪ್ಪಿಸಿದಿರಿ ನಮ್ಮನು ಶತ್ರುಗಳ ಕೈಗೆ.
18 ಸರ್ವೇಶ್ವರಾ, ತಾವು ನೀತಿವಂತರು!
19 ನಮ್ಮ ಗುಲಾಮಗಿರಿಯನ್ನು ಕಂಡೂ
ತೃಪ್ತರಾಗಲಿಲ್ಲಾ ಶತ್ರುಗಳು.

20 ತಮ್ಮನ್ನು ಸ್ತುತಿಸುವವರನ್ನು ನಾಶಮಾಡಲು,
ತಮ್ಮ ಪೂಜೆಯನ್ನು ನಿರ್ಮೂಲಮಾಡಲು,
ತಮ್ಮ ಮಂದಿರದ, ತಮ್ಮ ಪೀಠದ ಘನತೆಗೆ
ಕುಂದು ತರಲು,
21 ಅನರ್ಹದೇವತೆಗಳನ್ನು ಸ್ತುತಿಸಲು,
ನಶ್ವರ ರಾಜರನ್ನು ಪೂಜಿಸಲು
ತಮ್ಮ ದೇವತೆಗಳಿಗೆ ಪ್ರಮಾಣಮಾಡಿರುವರು
ಇವರು.
22 ಸರ್ವೇಶ್ವರಾ, ತಮ್ಮ ಪ್ರಭುತ್ವವನ್ನೊಪ್ಪಿಸದಿರಿ
ಶೂನ್ಯ ದೇವತೆಗಳಿಗೆ
ಗುರಿಪಡಿಸಬೇಡಿ ನಮ್ಮನ್ನು ಶತ್ರುಗಳ
ಪರಿಹಾಸ್ಯಕ್ಕೆ.
ಅವರ ಯೋಜನೆಗಳು ಮಾರಕವಾಗಲಿ
ಅವರಿಗೇ.
ನಮ್ಮ ಪರಿವಿನಾಶಕ್ಕೆ ಸಂಚುಮಾಡಿದಾ ವ್ಯಕ್ತಿ
ಅವನಿಗೇ ಎಚ್ಚರಿಕೆಯ ಗುರುತಾಗಲಿ.
23 ಸರ್ವೇಶ್ವರಾ, ನಮ್ಮನ್ನು ತಂದುಕೊಳ್ಳಿ
ನೆನಪಿಗೆ
ಆಪತ್ತಿನಲ್ಲಿ ನೆರವಿತ್ತು ಧೈರ್ಯನೀಡಿ ನಮಗೆ
ರಾಜಾಧಿರಾಜ, ಒಡೆಯ ತಾವು
ಸಕಲ ದೇವರುಗಳಿಗೆ.
24 ಕರುಣಿಸಿ, ಸಿಂಹರಾಜನ ಮುಂದೆ ನಿಂತು ನಾ
ವಾದಿಸುವಂತೆ
ಈ ರಾಜನು ಶತ್ರು ಹಾಮಾನನನ್ನು
ದ್ವೇಷಿಸುವಂತೆ
ಆ ಶತ್ರು ಹಾಗು ಅವನ ಸಂಗಡಿಗರು
ನಾಶವಾಗುವಂತೆ.
25 ಸರ್ವೇಶ್ವರಾ ರಕ್ಷಿಸಿ ನೆರವಿತ್ತು ಈ
ಒಬ್ಬಂಟಿಗಳಿಗೆ,
ಯಾರನ್ನು ಆಶ್ರಯಿಸಲಿ ನಾನು, ತಮ್ಮನ್ನಲ್ಲದೆ?
26 ಸರ್ವೇಶ್ವರಾ, ಬಲ್ಲಿರಲ್ಲವೆ ತಾವೆಲ್ಲವನು?
ತೃಣೀಕರಿಸುವೆ ನಾನು ದುರುಳರ ವೈಭವವನು
ಹೇಸುವೆ ಅನ್ಯರ ಹಾಗು ಸುನ್ನತಿರಹಿತರ
ಸಂಸರ್ಗವನು
ಅರಿತಿರುವಿರಿ ತಾವು ಇವೆಲ್ಲವನು.
27 ಸರ್ವೇಶ್ವರಾ, ಬೇರಾವ ವಿಧಿಯಿಲ್ಲ ಎನಗೆ
ಆಸ್ಥಾನದಲ್ಲಿ ಕಿರೀಟ ಧರಿಸುವುದು
ಅಸಹ್ಯವೆನಗೆ
ಕೊಳಕು ಬಟ್ಟೆಯಂತಿದೆ ಅದು ನನ್ನ ಪಾಲಿಗೆ
ಇತರ ದಿನಗಳಲಿ ಹಾಕುವೆ ಅದನು ಮೂಲೆಗೆ.

28 ಸೇರಿಲ್ಲ ನಾನೆಂದೂ ಹಾಮಾನನ ಊಟದ
ಪಂಕ್ತಿಗೆ
ಹೋಗಿಲ್ಲ ನಾನು ರಾಜನ ಔತಣಕೂಟಕೆ
ದೇವತೆಗಳಿಗರ್ಪಿತವಾದ ದ್ರಾಕ್ಷಾರಸವನು
ಕುಡಿದಿಲ್ಲ ಈವರೆಗೆ.
29 ಸರ್ವೇಶ್ವರಾ, ಅಬ್ರಹಾಮನ ದೇವರೇ,
ನಾನಿಲ್ಲಿಗೆ ಬಂದ ದಿನದಿಂದ ಇಂದಿನವರೆಗೆ
ನನಗಿತ್ತೆ ಸಂತಸ ಸಂತೃಪ್ತಿ,
ಅದುವೆ ಸಾಕೆನಗೆ.
30 ಓ ದೇವಾ, ಸಕಲ ಸೃಷ್ಟಿಗಳ ಒಡೆಯಾ,
ತಮ್ಮ ಜನರ ಈ ಪ್ರಾರ್ಥನೆಯನು
ಆಲಿಸಯ್ಯಾ
ನಂಬಿಕೆಗೆಟ್ಟು ನರಳುವವರ ಮೊರೆಯನ್ನು
ಕೇಳಯ್ಯಾ
ಅಕ್ರಮಿಗಳಿಂದ ನಮ್ಮನ್ನು ಕಾಪಾಡಯ್ಯಾ
ನನಗಿರುವ ಭಯವನು ತೊಲಗಿಸಯ್ಯಾ.

## ಅರಸನ ಸನ್ನಿಧಿಯಲ್ಲಿ ಎಸ್ತೇರಳು

೪ ಎಸ್ತೇರಳು ಮೂರು ದಿನಗಳ ಪ್ರಾರ್ಥನೆಯನ್ನು ಮುಗಿಸಿದನಂತರ, ತಾನು ಉಟ್ಟಿದ್ದ ಶೋಕವಸ್ತ್ರಗಳನ್ನು
ತೆಗೆದುಹಾಕಿ, ವೈಭವದ ವಸ್ತ್ರಾಭರಣಗಳನ್ನು ತೊಟ್ಟುಕೊಂಡಳು.
2 ರಾಣಿಯಂತೆ ಶೃಂಗಾರಮಾಡಿಕೊಂಡು ಸಕಲವನ್ನೂ ವೀಕ್ಷಿಸುವ ದೇವರಲ್ಲಿ ಮೊರೆ ಇಟ್ಟಳು.
3 ಇಬ್ಬರು ಸೇವಕಿಯರನ್ನು ಕರೆದುಕೊಂಡಳು. ಒಬ್ಬಳು ಪಕ್ಕದಲ್ಲಿದ್ದು ಅವಳನ್ನು
ಒರಗಿಸಿಕೊಂಡಿರಲಾಗಿ,
4ಮತ್ತೊಬ್ಬಳು ಅವಳ ಉಡುಪಿನ ಅಂಚನ್ನು ಹಿಂಬದಿಯಲ್ಲಿ ಎತ್ತಿ ಹಿಡಿದುಕೊಂಡು
ನಡೆದಳು.
5ಆಕೆಯ ಮುಖಸೌಂದರ್ಯ ಕಾಂತಿಯಿಂದ ಕಂಗೊಳಿಸುತ್ತಿತ್ತು. ಪ್ರೀತಿಯ ಹಾಗೂ ಹರ್ಷದ
ಹೊನಲು ಹರಿದಾಡುತ್ತಿದ್ದರೂ ಅವಳ ಅಂತರಂಗ ಭಯದಿಂದ ತಲ್ಲಣಿಸುತ್ತಿತ್ತು.
6 ಅರಮನೆಯ ಎಲ್ಲಾ ದ್ವಾರಗಳನ್ನು ಒಂದೊಂದಾಗಿ ದಾಟಿದ ನಂತರ, ರಾಜನ ಸಮ್ಮುಖದಲ್ಲಿ
ಬಂದು ನಿಂತಳು. ರಾಜನು ಸ್ವರ್ಣದ ಹಾಗು ಮುತ್ತುರತ್ನಖಚಿತವಾದ ಉಡುಪನ್ನು ಧರಿಸಿ, ಸಿಂಹಾಸನದ
ಮೇಲೆ ಮಂಡಿಸಿದ್ದನು. ಅದೊಂದು ಗಂಭೀರವಾದ ದೃಶ್ಯವಾಗಿತ್ತು.
7ರಾಜನ ಮುಖ
ತೇಜೋಮಯವಾಗಿತ್ತು. ಅವನು ಎಸ್ತೇರಳನ್ನು ಕಂಡಾಕ್ಷಣ, ಕೋಪದಿಂದ ಅವಳನ್ನು ದುರುಗುಟ್ಟಿ
ನೋಡಿದನು. ರಾಣಿಯ ಮುಖ ಭಯದಿಂದ ಬಿಳಿಚಿಕೊಂಡಿತು. ತತ್ತರಿಸುತ್ತಾ ತನ್ನ ಸೇವಕಿಯ ಭುಜದ
ಮೇಲೆ ಕುಸಿದುಬಿದ್ದಳು.
8 ಆಗ ದೇವರು ರಾಜನ ಕೋಪವನ್ನು ತಣಿಸಿದರು. ಅವನ ಮನಸ್ಸು ಮೃದುವಾಯಿತು. ತಟ್ಟನೆ
ಅವನು ಸಿಂಹಾಸನದಿಂದ ಕೆಳಕ್ಕಿಳಿದು ಅವಳನ್ನು ಮೇಲಕ್ಕೆತ್ತಿದನು. ಅವಳು ಸ್ಥಿಮಿತಕ್ಕೆ ಬರುವವರೆಗೂ ತನ್ನ
ತೋಳಿನ ತೆಕ್ಕೆಯಲ್ಲೆ ಅವಳನ್ನು ಹಿಡಿದುಕೊಂಡಿದ್ದನು.
9ಅನಂತರ ಉಪಶಮನದ ಮಾತುಗಳಿಂದ:
"ಎಸ್ತೇರ್, ಏನು ಆಯಿತು? ಭಯಪಡಬೇಡ, ನೀನು ಸಾಯುವುದಿಲ್ಲ.
10ನಮ್ಮ ರಾಜಾಜ್ಞೆ ಅನ್ವಯಿಸುವುದು
ಜನಸಾಮಾನ್ಯರಿಗೆ ಮಾತ್ರ, ನಿನಗಲ್ಲ. ನಾನು ನಿನ್ನ ಪತಿಯಲ್ಲವೆ?
11ಬಾ ನನ್ನ ಬಳಿಗೆ," ಎಂದನು.
12ಬಳಿಕ
ತನ್ನ ಚಿನ್ನದ ರಾಜದಂಡವನ್ನು ಮೇಲೆತ್ತಿ ಎಸ್ತೇರಳ ಕೊರಳಿಗೆ ಮುಟ್ಟಿಸಿದನು. ಅವಳನ್ನು ಆಲಂಗಿಸಿ
ಮುತ್ತಿಟ್ಟು: "ವಿಷಯವೇನು ಹೇಳು" ಎಂದನು.

13 ಅದಕ್ಕೆ ಎಸ್ತೇರಳು, "ಪ್ರಭುವೇ, ಮಹಾಸ್ವಾಮಿಗಳೇ, ನಾನು ತಮ್ಮನ್ನು ನೋಡಿದಾಗ ತಾವೊಬ್ಬ ದೇವದೂತನಂತೆ ಕಂಡಿರಿ. ತಮ್ಮ ಗಂಭೀರ ನೋಟ ನನ್ನಲ್ಲಿ ಭಯವನ್ನು ಹುಟ್ಟಿಸಿತು.

14 "ಮಹಾಸ್ವಾಮಿಗಳೇ, ತಾವು ಅದ್ಭುತ ಸ್ವರೂಪರು, ನಿಮ್ಮ ಮುಖ ಕಾಂತಿಮಯವಾಗಿದೆ," ಎಂದಳು.

15 ಎಸ್ತೇರಳು ಹೀಗೆ ಮಾತಾಡುತ್ತಿರುವಾಗಲೇ ಮತ್ತೊಮ್ಮೆ ಮೂರ್ಛೆಹೋಗಿ ಕೆಳಗೆ ಬಿದ್ದಳು.

16 ಅರಸನು ತಳಮಳಗೊಂಡನು. ಆಸ್ಥಾನದ ಸೇವಕಿಯರೆಲ್ಲ ರಾಣಿಯನ್ನು ಪುನಶ್ಚೇತನಗೊಳಿಸಲು ಪ್ರಯತ್ನಿಸಿದರು.

**5** 1–3ಅರಸನು ಆಕೆಗೆ, "ಎಸ್ತೇರ್ ರಾಣಿಯೇ, ನಿನ್ನ ಅಪೇಕ್ಷೆ ಏನು? ನಿನ್ನ ವಿಜ್ಞಾಪನೆ ಏನು? ನೀನು ನನ್ನ ರಾಜ್ಯದ ಅರ್ಧಭಾಗವನ್ನು ಕೇಳಿದರೂ ಸರಿ ನಾನದನ್ನು ನಿನಗೆ ಕೊಡುವೆನು," ಎಂದನು. 4ಪ್ರತ್ಯುತ್ತರವಾಗಿ ಎಸ್ತೇರಳು, "ಅರಸರ ಚಿತ್ತವಾದರೆ ನಾನು ತಮಗೋಸ್ಕರ ಸಿದ್ಧಮಾಡಿಸಿರುವ ಔತಣಕ್ಕೆ, ತಾವು ಹಾಮಾನನೊಂದಿಗೆ ದಯಮಾಡಿಸಬೇಕು," ಎಂದು ವಿನಂತಿಸಿದಳು. 5ಕೂಡಲೆ ಅರಸನು, "ಎಸ್ತೇರಳ ವಿಜ್ಞಾಪನೆಯನ್ನು ಈಡೇರಿಸಲು ಹಾಮಾನನನ್ನು ತ್ವರೆಪಡಿಸಿ," ಎಂದು ಆಜ್ಞಾಪಿಸಿದನು. ಎಸ್ತೇರಳು ಏರ್ಪಡಿಸಿದ್ಧ ಔತಣಕ್ಕೆ ಹಾಮಾನನೊಂದಿಗೆ ಹೋದನು. 5ದ್ರಾಕ್ಷಾರಸ ಪಾನಮಾಡುತ್ತಿರುವಾಗ ಅರಸನು ಮತ್ತೊಮ್ಮೆ ಎಸ್ತೇರಳಿಗೆ, "ನಿನ್ನ ವಿಜ್ಞಾಪನೆ ಯಾವುದು ಹೇಳು. ನಾನದನ್ನು ನೆರವೇರಿಸುವೆನು. ನೀನು ನನ್ನ ರಾಜ್ಯದ ಅರ್ಧಭಾಗವನ್ನು ಕೇಳಿದರೂ ಸರಿ, ನಾನದನ್ನು ನಿನಗೆ ಕೊಡುವೆನು," ಎನ್ನಲು 7ಎಸ್ತೇರಳು, "ತಾವು ನನ್ನ ಮೇಲೆ ಕೃಪಾಕಟಾಕ್ಷವಿಟ್ಟು ನಾನು ಕೇಳುವುದನ್ನು ಅನುಗ್ರಹಿಸುವುದಕ್ಕೂ ಚಿತ್ತವಾದರೆ, 8ನಾನು ತಮಗೋಸ್ಕರ ಮಾಡಿಸಲಿರುವ ಔತಣಕ್ಕೆ ನಾಳೆಯೂ ಹಾಮಾನನೊಂದಿಗೆ ದಯಮಾಡಿಸಬೇಕು. ಆಗ ತಾವು ಹೇಳಿದಂತೆ ನಾನು ಮಾಡುವೆನು. ಇದೇ ನನ್ನ ದೈನ್ಯ ಮನವಿ," ಎಂದು ಉತ್ತರವಿತ್ತಳು.

### ಮೊರ್ದೆಕೈಯನ ಕೊಲೆಗೆ ಹಾಮಾನನ ಹಂಚಿಕೆ

9 ಅಂದು ಹಾಮಾನನು ಹರ್ಷಭರಿತನಾಗಿ ಮನೆಗೆ ಹಿಂದಿರುಗುತ್ತಿರುವಾಗ ಮೊರ್ದೆಕೈ ತನಗೆ ಭಯಪಡದೆ, ತನ್ನ ಮುಂದೆ ಏಳದೆಯೂ ಅರಮನೆಯ ಹೆಬ್ಬಾಗಿಲಿನಲ್ಲಿ ಕುಳಿತುಕೊಂಡೇ ಇರುವುದನ್ನು ಕಂಡು ಅವನ ಮೇಲೆ ಕಡುಗೋಪಗೊಂಡನು. 10ಆದರೂ ಸಹನೆ ಕಳೆದುಕೊಳ್ಳದೆ ಮನೆಗೆ ಹೋಗಿ ತನ್ನ ಆಪ್ತರನ್ನೂ ತನ್ನ ಪತ್ನಿ ಜೆರೆಷಳನ್ನೂ ಕರೆಯಿಸಿ, ಅವರ ಮುಂದೆ ತನ್ನ 11ಸಿರಿಸಂಪತ್ತನ್ನೂ ಪುತ್ರಲಾಭತಿಶಯವನ್ನೂ ಅರಸನು ತನ್ನನ್ನು ಸನ್ಮಾನಿಸಿ ಎಲ್ಲಾ ಪದಾಧಿಕಾರಿಗಳಲ್ಲಿಯೂ ರಾಜಸೇವಕರಲ್ಲಿಯೂ ತನಗೆ ಶ್ರೇಷ್ಠಸ್ಥಾನವನ್ನು ಕೊಟ್ಟದ್ದನ್ನೂ ವರ್ಣಿಸಿದನು. 12ಇದಲ್ಲದೆ, ಎಸ್ತೇರ್ ರಾಣಿಯೇ ಸ್ವತಃ ಏರ್ಪಡಿಸಿದ ಔತಣಕ್ಕೆ ಅರಸನ ಜೊತೆಯಲ್ಲಿ ತನ್ನನ್ನಲ್ಲದೆ ಬೇರಾರನ್ನು ಕರೆದಿಲ್ಲವೆಂತಲೂ ಮರುದಿನವೂ ಅರಸನೊಂದಿಗೆ ಔತಣ ಮಾಡಲು ತನ್ನನ್ನು ಆಹ್ವಾನಿಸಿರುವಳೆಂದೂ ತಿಳಿಸಿದನು. 13ಆದರೂ ಯೆಹೂದ್ಯನಾದ ಮೊರ್ದೆಕೈ ಅರಮನೆಯ ಬಾಗಿಲಲ್ಲಿ ತನ್ನ ಕಣ್ಣೆದುರು ಕುಳಿತಿರುವವರೆಗೂ ತನಗೆ ಯಾವ ಪ್ರಯೋಜನವೂ ಇಲ್ಲವೆಂದು ಹೇಳಿದನು. 14ಅದಕ್ಕೆ ಅವನ ಪತ್ನಿ ಜೆರೆಷಳೂ ಹಾಗೂ ಅವನ ಆಪ್ತರೂ ಅವನಿಗೆ, "ಅರಸನ ಅಪ್ಪಣೆಯನ್ನು ಪಡೆದು ಮೊರ್ದೆಕೈಯನ್ನು ಗಲ್ಲಿಗೇರಿಸುವ ಸಲುವಾಗಿ ಇಪ್ಪತ್ತೆರಡು ಮೀಟರ್ ಉದ್ದದ ಗಲ್ಲುಮರವೊಂದನ್ನು ಸಿದ್ಧಮಾಡಿಸು. ಅನಂತರ ನೀನು ನೆಮ್ಮದಿಯಿಂದ ಅರಸನ ಜೊತೆ ಔತಣಕ್ಕೆ ಹೋಗಬಹುದು," ಎಂದು ಸಲಹೆ ನೀಡಿದರು. ಅದು ಅವನಿಗೆ ಸಮರ್ಪಕವಾಗಿ ಕಂಡುಬರಲು ಹಾಮಾನನು ಅದರಂತೆಯೇ ಗಲ್ಲುಮರವನ್ನು ಸಿದ್ಧಮಾಡಿಸಿದನು.

### ಮೊರ್ದೆಕೈಗೆ ರಾಜಗೌರವ

**6** ಆ ರಾತ್ರಿ ಅರಸನಿಗೆ ನಿದ್ದೆಯೇ ಬರಲಿಲ್ಲ. ಆದ್ದರಿಂದ, ಸ್ಮರಿಸತಕ್ಕ ಪೂರ್ವ ಘಟನೆಗಳನ್ನು ಬರೆದಿಟ್ಟಿದ್ದ ಗ್ರಂಥವನ್ನು ತರಿಸಿ, ಅದನ್ನು ಪಾರಾಯಣ ಮಾಡಿಸುತ್ತಿದ್ದಾಗ 2ಅರಸನನ್ನು ಕೊಲ್ಲಲು ದ್ವಾರಪಾಲಕರಾದ ಬಿಗೆತಾನ್, ತೆರೆಷ್ ಎಂಬಿಬ್ಬರು ರಾಜ ಕಂಚುಕಿಗಳು ಪಿತೂರಿ ನಡೆಸಿದ್ದ ಪ್ರಕರಣ ಹಾಗೂ ಅದು

ಮೊರ್ದೆಕೈಯ ಮುಖಾಂತರ ತಿಳಿದುಬಂದ ಲಿಖಿತವಿಷಯ ಅದರಲ್ಲಿ ಸಿಕ್ಕಿದವು. 3ಆಗ ಅರಸನು, "ಈ ಸತ್ಕಾರ್ಯಕ್ಕಾಗಿ ಮೊರ್ದೆಕೈಯನಿಗೆ ಯಾವ ಸನ್ಮಾನ ಮಾಡಲಾಯಿತು?" ಎಂದು ವಿಚಾರಿಸಿದಾಗ, ಅವನ ಆಸ್ಥಾನ ಸೇವಕರು "ಯಾವುದೂ ಇಲ್ಲ" ಎಂದು ಉತ್ತರವಿತ್ತರು.

4 ಕೂಡಲೆ ಅರಸನು, "ಯಾರಲ್ಲಿ, ಅಂಗಳದಲ್ಲಿ?" ಎಂದು ವಿಚಾರಿಸಿದನು. ಅಷ್ಟರಲ್ಲಿ, ತಾನೆ ಸಿದ್ಧಮಾಡಿಕೊಂಡಿದ್ದ ಗಲ್ಲುಮರಕ್ಕೆ ಮೊರ್ದೆಕೈಯನ್ನು ನೇಣುಹಾಕಿಸಲು ಅರಸನ ಅಪ್ಪಣೆಯನ್ನು ಪಡೆಯುವುದಕ್ಕೋಸ್ಕರ ಹಾಮಾನನು ಆಗತಾನೆ ಅರಮನೆಯ ಹೊರಾಂಗಣ ಅಂಗಳಕ್ಕೆ ಬಂದಿದ್ದನು.

5 ಆದ್ದರಿಂದ ರಾಜಸೇವಕರು, "ಇಗೋ, ಹಾಮಾನನು ಅಂಗಳದಲ್ಲಿ ನಿಂತುಕೊಂಡಿದ್ದಾನೆ," ಎಂದರು. ಅರಸನು, "ಅವನು ಒಳಗೆ ಬರಲಿ," ಎಂದು ಅಪ್ಪಣೆ ಮಾಡಿದನು. 6ಹಾಮಾನನು ಒಳಗೆ ಬಂದಾಗ ಅರಸನು ಅವನಿಗೆ, "ಅರಸನು ಒಬ್ಬ ವ್ಯಕ್ತಿಯನ್ನು ಗೌರವಿಸಲು ಬಯಸಿದರೆ ಅಂಥ ವ್ಯಕ್ತಿಗೆ ನೀಡಬಹುದಾದ ತಕ್ಕ ಸನ್ಮಾನ ಯಾವುದು?" ಎಂದು ವಿಚಾರಿಸಿದನು.

7 ಹಾಮಾನನು ತನ್ನನ್ನಲ್ಲದೆ ಬೇರೆ ಯಾರನ್ನು ಸನ್ಮಾನಿಸಲು ಅರಸನು ಬಯಸಿಯಾನು ಎಂದು ತನ್ನಲ್ಲೆ ಅಂದುಕೊಂಡು ಅವನಿಗೆ ಪ್ರತ್ಯುತ್ತರವಾಗಿ, "ಅರಸನು ಸನ್ಮಾನಿಸಬೇಕೆಂದಿರುವ ವ್ಯಕ್ತಿಗೆ ಈ ರೀತಿ ಮಾಡಬೇಕು: 8ಅರಸನು ಧರಿಸಿಕೊಳ್ಳುವ ರಾಜವಸ್ತ್ರಗಳನ್ನೂ ಸವಾರಿ ಮಾಡುವ ಪಟ್ಟದ ಕುದುರೆಯನ್ನೂ ತರಿಸಬೇಕು. 9ಆ ವಸ್ತ್ರಗಳನ್ನೂ ಕುದುರೆಯನ್ನೂ ಅರಸನ ಪ್ರಧಾನ ಸರದಾರರಲ್ಲೊಬ್ಬನ ವಶಕ್ಕೆ ಕೊಡಬೇಕು; ಇವನು, ಅರಸನು ಸನ್ಮಾನಿಸಬೇಕೆಂದಿರುವ ವ್ಯಕ್ತಿಗೆ ರಾಜವಸ್ತ್ರಗಳನ್ನು ತೊಡಿಸಿ, ಕುದುರೆಯ ಮೇಲೆ ಕೂರಿಸಿ ಪಟ್ಟಣದ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿಸುತ್ತಾ, ಅವನ ಮುಂದೆ 'ಅರಸನು ಸನ್ಮಾನಿಸಬೇಕೆಂದಿರುವ ವ್ಯಕ್ತಿಯನ್ನು ಗೌರವಿಸುವ ರೀತಿ ಇದೇ' ಎಂದು ಪ್ರಕಟಪಡಿಸಬೇಕು" ಎಂದನು.

10 ಕೂಡಲೆ ಅರಸನು ಹಾಮಾನನಿಗೆ, "ನೀನು ಹೇಳಿದ ಪ್ರಕಾರವೇ ಬೇಗನೆ ಹೋಗಿ ರಾಜ ವಸ್ತ್ರಗಳನ್ನೂ ಪಟ್ಟದ ಕುದುರೆಯನ್ನೂ ತೆಗೆದುಕೊಂಡು ಅರಮನೆಯ ಬಾಗಿಲಲ್ಲಿ ಕುಳಿತಿರುವ ಮೊರ್ದೆಕೈ ಎಂಬ ಯೆಹೂದ್ಯನಿಗೆ ಹಾಗೆಯೇ ಮಾಡು. ನೀನು ಸಲಹೆ ಮಾಡಿದವುಗಳಲ್ಲಿ ಒಂದನ್ನೂ ಬಿಡದೆ ಚಾಚೂ ತಪ್ಪದೆ ನೆರವೇರಿಸು," ಎಂದು ಅಪ್ಪಣೆ ಮಾಡಿದನು.

11 ಬೇರೆ ವಿಧಿಯಿಲ್ಲದೆ ಹಾಮಾನನು ಹೊರಟು ಆ ವಸ್ತ್ರಗಳನ್ನು, ಕುದುರೆಯನ್ನು ತೆಗೆದುಕೊಂಡು ಮೊರ್ದೆಕೈಗೆ ಆ ವಸ್ತ್ರಗಳನ್ನು ತೊಡಿಸಿ, ಅವನನ್ನು ಕುದುರೆಯ ಮೇಲೆ ಕೂರಿಸಿ ಪಟ್ಟಣದ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿಸಿ ಅವನ ಮುಂದೆ, "ಅರಸನು ಸನ್ಮಾನಿಸಬೇಕೆಂದಿರುವ ವ್ಯಕ್ತಿಯನ್ನು ಗೌರವಿಸುವ ರೀತಿ ಇದೇ" ಎಂದು ಪ್ರಕಟಪಡಿಸಿದನು.

12 ಮೊರ್ದೆಕೈ ಪುನಃ ಅರಮನೆಯ ಬಾಗಿಲಿಗೆ ಬಂದನು. ಹಾಮಾನನಾದರೋ ವ್ಯಸನಕ್ರಾಂತನಾಗಿ ಮುಖಮುಚ್ಚಿಕೊಂಡು ಶೀಘ್ರವಾಗಿ ಮನೆಗೆ ಧಾವಿಸಿದನು.

13 ತನ್ನ ಪತ್ನಿ ಜೆರೆಷಳಿಗೂ ಎಲ್ಲಾ ಆಪ್ತರಿಗೂ ತನಗೆ ಸಂಭವಿಸಿದ್ದುದನ್ನೆಲ್ಲಾ ವರದಿ ಮಾಡಿದನು. ಆಗ ಅವನ ಪಂಡಿತರೂ ಪತ್ನಿಯೂ ಅವನಿಗೆ, "ಯಾವನಿಂದ ನಿನ್ನ ಪತನವು ಪ್ರಾರಂಭವಾಯಿತೋ ಆ ವ್ಯಕ್ತಿ ಒಂದು ವೇಳೆ ಯೆಹೂದ್ಯನಾಗಿದ್ದರೆ, ನೀನು ಅವನನ್ನು ಎಂದಿಗೂ ಜಯಿಸಲಾರೆ. ಅವನ ಮುಂದೆ ಬಿದ್ದು ಹಾಳಾಗುವೆ," ಎಂದು ಎಚ್ಚರವಿತ್ತರು.

### ಹಾಮಾನನ ಹತ್ಯೆ

14 ಅವರು ಇನ್ನೂ ಮಾತಾಡುತ್ತಿರುವಾಗಲೇ ರಾಜಕಂಚುಕಿಗಳು ಬಂದು, ಎಸ್ತೇರಳು ಏರ್ಪಡಿಸಿರುವ ಔತಣಕ್ಕೆ ಬೇಗನೆ ಹೊರಟು ಬರಬೇಕೆಂದು ಹಾಮಾನನನ್ನು ಕರೆದರು.

**7** ಅರಸನು ಹಾಮಾನನೊಡನೆ ಔತಣಕ್ಕಾಗಿ ಎಸ್ತೇರಳ ಮನೆಗೆ ಬಂದನು. 2ಅರಸನು ಈ ಎರಡನೆಯ ದಿನದಲ್ಲೂ ದ್ರಾಕ್ಷಾರಸ ಪಾನ ಮಾಡುತ್ತಿರುವಾಗ ಎಸ್ತೇರಳಿಗೆ, "ಎಸ್ತೇರ್ ರಾಣಿಯೆ, ನಿನ್ನ ವಿಜ್ಞಾಪನೆ ಯಾವುದು ಹೇಳು; ಅದನ್ನು ನಾನು ನೆರವೇರಿಸುವೆನು. ನನ್ನ ರಾಜ್ಯದ ಅರ್ಧಭಾಗವನ್ನು ಕೇಳಿದರೂ ಸರಿ,

ನಾನದನ್ನು ನಿನಗೆ ಕೊಡುವೆನು," ಎನ್ನಲು 3ಎಸ್ತೇರಳು ಪ್ರತ್ಯುತ್ತರವಾಗಿ, "ಅರಸರು ನನ್ನ ಮೇಲೆ ಕೃಪಾ ಕಟಾಕ್ಷವನ್ನಿಟ್ಟು ಈಡೇರಿಸುವುದಾದರೆ ನನ್ನ ವಿಜ್ಞಾಪನೆಯನ್ನು, ಪ್ರಾರ್ಥನೆಯನ್ನು ಲಾಲಿಸಿ, ನನ್ನ ಪ್ರಾಣವನ್ನೂ ನನ್ನ ಜನರ ಪ್ರಾಣವನ್ನೂ ಉಳಿಸಬೇಕು. 4ಜನರು ನಮ್ಮನ್ನು ಕೊಂದು, ಸಂಹರಿಸಿ, ನಿರ್ನಾಮಗೊಳಿಸುವ ಹಾಗೆ ನಮ್ಮನ್ನು ಮಾರಲಾಯಿತು. ಬರೀ ಮಾರಾಟವಾಗಿದ್ದರೆ ಈ ದುರಂತ ಪರಿಸ್ಥಿತಿಯ ವಿಷಯದಲ್ಲಿ ಅರಸರಿಗೆ ತೊಂದರೆಪಡಿಸುವುದು ಸರಿಯಲ್ಲವೆಂದು ಸುಮ್ಮನಿದ್ದುಬಿಡುತ್ತಿದ್ದೆ," ಎಂದಳು.

5 ಆಗ ಅರಸನು, "ಇಂಥ ದುಷ್ಕೃತ್ಯವನ್ನು ಎಸಗಲು ಸಂಚುನಡೆಸಿದ ಕೇಡಿಗನು ಯಾರು? ಎಲ್ಲಿರುವನು ಅವನು?" ಎಂದು ಕೇಳಲು 6ಆಕೆ, "ನಮ್ಮ ವೈರಿಯೂ ಶತ್ರುವೂ ಬೇರಾರೂ ಅಲ್ಲ; ಇಗೋ ಈ ಹಾಮಾನನೇ ಆ ದುಷ್ಟ," ಎಂದಳು. ಇದನ್ನು ಕೇಳಿದೊಡನೆ ಹಾಮಾನನು ಅರಸನ ಮತ್ತು ರಾಣಿಯ ಮುಂದೆ ಭಯದಿಂದ ನಡುಗಿ ಪಾನಮಾಡುವುದನ್ನು ಬಿಟ್ಟೆದ್ದು, ತೋಟಕ್ಕೆ ಹೋದನು. ಅರಸನಿಂದ ತನಗೆ ಶಿಕ್ಷೆ ನಿಶ್ಚಿತವೆಂದು ಅರಿತ ಹಾಮಾನನು ಎಸ್ತೇರ್ ರಾಣಿಯ ಮುಂದೆ ಪ್ರಾಣಭಿಕ್ಷೆಗಾಗಿ ಅಂಗಲಾಚಿ ಬೇಡುತ್ತಾ ನಿಂತನು. 8ಅರಸನು ಅರಮನೆಯ ತೋಟದಿಂದ, ತಾನು ದ್ರಾಕ್ಷಾರಸ ಸೇವಿಸುತ್ತಿದ್ದ ಕೊಠಡಿಗೆ ಹಿಂದಿರುಗಿ ಬಂದಾಗ ಎಸ್ತೇರಳು ಒರಗಿಕೊಂಡಿದ್ದ ಸುಖಾಸನದತ್ತ ಹಾಮಾನನು ಬಾಗಿರುವುದನ್ನು ಕಂಡು, "ಇದೇನು? ಇವನು ನನ್ನ ಮುಂದೆಯೇ, ನನ್ನ ಅರಮನೆಯಲ್ಲಿಯೇ ರಾಣಿಯ ಮೇಲೆ ಬಲಾತ್ಕಾರ ಮಾಡಲು ಹೊರಟಿರುವನೆ?" ಎಂದನು. ಅರಸನ ಬಾಯಿಂದ ಈ ಮಾತುಗಳು ಹೊರಬಿದ್ದದ್ದೇ ತಡ, ಸೇವಕರು ಹಾಮಾನನ ಮುಖದ ಮೇಲೆ ಮುಸುಕನ್ನು ಎಳೆದರು. 9ಇದಲ್ಲದೆ, ಅರಸನ ಸೇವೆಯಲ್ಲಿದ್ದ ಕಂಚುಕಿಗಳಲ್ಲೊಬ್ಬನಾದ ಹರ್ಬೋನನು, "ಇಗೋ, ಅರಸನ ಪ್ರಾಣವನ್ನು ರಕ್ಷಿಸಲು ಸಮಾಚಾರವನ್ನು ತಿಳಿಸಿದ ಮೊರ್ದೆಕೈಯನ್ನು ಕೊಲ್ಲುವುದಕ್ಕಾಗಿ ಹಾಮಾನನು ಸಿದ್ಧಮಾಡಿಸಿದ ಇಪ್ಪತ್ತೆರಡು ಮೀಟರ್ ಎತ್ತರದ ನೇಣು ಗಂಬವಿದೆಯಲ್ಲ," ಎನ್ನಲು ಅರಸನು, "ಇವನನ್ನು ಅದಕ್ಕೆ ನೇತುಹಾಕಿರಿ," ಎಂದು ಆಜ್ಞಾಪಿಸಿದನು.

10 ಮೊರ್ದೆಕೈಗೋಸ್ಕರ ಹಾಮಾನನು ಸಿದ್ಧಮಾಡಿದ್ದ ಅದೇ ಗಲ್ಲಿಗೆ ಅವನನ್ನು ಏರಿಸಿದರು. ಅರಸನ ಕೋಪವು ಶಾಂತವಾಯಿತು.

## ಯುದ್ಧಮಾಡಲು ಯೆಹೂದ್ಯರಿಗೆ ಕರೆ

**8** ಆ ದಿನದಲ್ಲಿ ಅರಸ ಅಹಷ್ವೇರೋಷನು, ಯೆಹೂದ್ಯರ ಶತ್ರು ಹಾಮಾನನು ವಾಸ ಆಗಿದ್ದ ನಿವಾಸವನ್ನು ರಾಣಿ ಎಸ್ತೇರಳಿಗೆ ಕೊಟ್ಟನು. ಆಕೆ ತನಗೂ ಮೊರ್ದೆಕೈಗೂ ಇದ್ದ ನಿಜ ಸಂಬಂಧವನ್ನು ಅರಸನಿಗೆ ತಿಳಿಸಿದಳು. ಆಗ 2ಅರಸನು ಮೊರ್ದೆಕೈಯನ್ನು ಗೌರವದಿಂದ ಸ್ವಾಗತಿಸಿ ಹಾಮಾನನಿಂದ ತೆಗೆಸಿದ ತನ್ನ ಮುದ್ರೆಯುಂಗುರವನ್ನು ಅವನಿಗೆ ತೊಡಿಸಿದನು. ಎಸ್ತೇರಳು ಹಾಮಾನನ ಮನೆಯ ಆಡಳಿತವನ್ನು ಮೊರ್ದೆಕೈಯನಿಗೆ ವಹಿಸಿದಳು.

3 ಎಸ್ತೇರಳು ಪುನಃ ಅರಸನ ಮುಂದೆ ಹೋಗಿ ಅವನ ಪಾದಗಳಿಗೆರಗಿ, ಅಳುತ್ತಾ, ಆಗಾನನ ವಂಶದವನಾದ ಹಾಮಾನನು ಯೆಹೂದ್ಯರ ಹಾನಿಗಾಗಿ ಹೂಡಿದ್ದ ದುಷ್ಟ ಯೋಜನೆಯನ್ನು ರದ್ದುಪಡಿಸುವಂತೆ ವಿಜ್ಞಾಪಿಸಿದಳು. 4ಅರಸನು ತನ್ನ ಸ್ವರ್ಣದಂಡವನ್ನು ಆಕೆಯ ಕಡೆಗೆ ಚಾಚಲು, ಆಕೆ ಅವನ ಮುಂದೆ ಎದ್ದು ನಿಂತು, 5"ತಾವು ನನ್ನ ಮೇಲೆ ಕೃಪಾಕಟಾಕ್ಷವಿರಿಸಿ ನನ್ನನ್ನು ಮೆಚ್ಚಿ ನಾನು ಹೇಳುವ ಮಾತು ಸಮಂಜಸವಾದುದೆಂದು ಎಣಿಸಿ ಅದಕ್ಕೆ ಸಮ್ಮತಿಸುವುದಾದರೆ, ತಮ್ಮ ಎಲ್ಲಾ ಸಂಸ್ಥಾನಗಳಲ್ಲಿರುವ ಯೆಹೂದ್ಯರನ್ನು ಸಂಹರಿಸುವ ಸಲುವಾಗಿ ಆಗಾನನ ವಂಶದವನೂ ಹೆಮ್ಮೆದಾತನ ಮಗನೂ ಆದ ಹಾಮಾನನು ಬರೆಸಿದ ಪತ್ರಗಳನ್ನು ರದ್ದುಗೊಳಿಸಲು ಆಜ್ಞೆ ಹೊರಡಿಸಬೇಕು. 6ನನ್ನ ಜನರಿಗೆ ಕೇಡು ಸಂಭವಿಸುವುದನ್ನು ಕಣ್ಣಾರೆ ಕಂಡು ನಾನು ಹೇಗೆತಾನೆ ಸಹಿಸಲಿ? ನನ್ನ ಕುಲನಾಶವನ್ನು ಕಂಡು ಸುಮ್ಮನಿರುವುದಾದರೂ ಹೇಗೆ?" ಎಂದು ಬಿನ್ನವಿಸಿದಳು.

7 ಆಗ ಅರಸನು, ರಾಣಿ ಎಸ್ತೇರಳಿಗೂ ಯೆಹೂದ್ಯನಾದ ಮೊರ್ದೆಕೈಗೂ, "ಹಾಮಾನನು ಯೆಹೂದ್ಯರ ವಿರುದ್ಧ ಕೈಯೆತ್ತಿದ್ದರಿಂದ ಅವನನ್ನು ಗಲ್ಲಿಗೇರಿಸಿ ಅವನ ಮನೆಯನ್ನು ಎಸ್ತೇರಳಿಗೆ ದಾನಮಾಡಿದೆನಲ್ಲವೆ? 8ಅರಸನ ಹೆಸರಿನಲ್ಲಿ ಬರೆಯಲಾದ ರಾಜಮುದ್ರೆಯನ್ನು ಹೊಂದಿರುವ ಲೇಖನವನ್ನು

ಯಾರೂ ರದ್ದುಮಾಡಲಾಗದು. ಆದ್ದರಿಂದ ಯೆಹೂದ್ಯರ ವಿಷಯದಲ್ಲಿ ನಿಮಗೆ ಸರಿತೋರಿದಂತೆ ಅರಸನ ಹೆಸರಿನಲ್ಲಿ ನೀವೂ ಪತ್ರ ಬರೆಯಿಸಿ, ಅದಕ್ಕೆ ರಾಜಮುದ್ರೆಯನ್ನು ಹಾಕಿರಿ," ಎಂದು ಹೇಳಿದನು.

9 ಆಗ ರಾಜಲೇಖಕರನ್ನು ಕರೆಸಲಾಯಿತು. ಇವರು ಮೂರನೆಯ ತಿಂಗಳಾದ ಜೇಷ್ಠಮಾಸದ ಇಪ್ಪತ್ತಮೂರನೇ ದಿನದಲ್ಲಿ ಬಂದು ಮೊರ್ದೆಕೈಯ ಆಜ್ಞಾನುಸಾರ ಯೆಹೂದ್ಯರಿಗೂ ಭಾರತ (ಇಂಡಿಯಾ)ದಿಂದ ಮೊದಲ್ಗೊಂಡು ಇಥಿಯೋಪಿಯವರೆಗೂ ಹರಡಿರುವ ನೂರಿಪ್ಪತ್ತೇಳು ಸಂಸ್ಥಾನಗಳ ಉಪರಾಜರಿಗೂ ದೇಶಾಧಿಪತಿಗಳಿಗೂ ಅಧಿಕಾರಿಗಳಿಗೂ ಆಯಾ ಸಂಸ್ಥಾನಗಳ ಲಿಪಿಯಲ್ಲೂ, ಆಯಾ ಜನಾಂಗಗಳ ಭಾಷೆಯಲ್ಲೂ ಪತ್ರಗಳನ್ನು ಬರೆದರು. 10ಅರಸನ ಹೆಸರಿನಲ್ಲಿ ಬರೆಯಲಾದ ಈ ಪತ್ರಗಳಿಗೆ ಮೊರ್ದೆಕೈ ರಾಜಮುದ್ರೆಯನ್ನು ಒತ್ತಿ, ಅರಮನೆಯ ಅಶ್ವಾಲಯಗಳಲ್ಲೇ ಹುಟ್ಟಿ ಬೆಳೆದ ಸವಾರಿ ಕುದುರೆಗಳನ್ನೇರಿ ಹೊರಟ ಅಂಚೆಯವರ ಮುಖಾಂತರ ಕಳುಹಿಸಿದನು.

11ಆ ಪತ್ರದ ಪ್ರಕಾರ ಅರಸ ಅಹಷ್ವೇರೋಷನ ಎಲ್ಲಾ ಸಂಸ್ಥಾನಗಳ ಆಯಾ ಪಟ್ಟಣಗಳಲ್ಲಿ ಇರುವ ಎಲ್ಲಾ ಯೆಹೂದ್ಯರು ಒಂದೇ ದಿನದಲ್ಲಿ, 12ಅಂದರೆ, ಹನ್ನೆರಡನೆಯ ತಿಂಗಳಾದ ಫಾಲ್ಗುಣ ಮಾಸದ ಹದಿಮೂರನೆಯ ದಿನದಲ್ಲಿ ಒಟ್ಟಾಗಿ ಸೇರಿ ತಮ್ಮ ಪ್ರಾಣರಕ್ಷಣೆಗಾಗಿ ದಂಗೆಯೆದ್ದು, ತಮಗೆ ವಿರೋಧವಾಗಿ ಆಯುಧಗಳೊಡನೆ ನೆರೆದು ಬರುವ ಎಲ್ಲಾ ಜನಾಂಗಗಳವರನ್ನೂ ಸಂಸ್ಥಾನಗಳವರನ್ನೂ ಮಕ್ಕಳು ಮಹಿಳೆಯರೆನ್ನದೆ ಎಲ್ಲರನ್ನೂ ಕೊಂದು ಸಂಹರಿಸಿ, ನಿರ್ನಾಮಗೊಳಿಸಿ, ಅವರ ಆಸ್ತಿ ಪಾಸ್ತಿಯನ್ನೆಲ್ಲಾ ಸೂರೆಮಾಡಲು ರಾಜಾಜ್ಞೆ ಕೊಡಲಾಗಿತ್ತು.

## ಯೆಹೂದ್ಯರ ಪರವಾದ ರಾಜಾಜ್ಞೆ

**೫** ಆ ಪತ್ರದ ನಕಲು ಹೀಗಿತ್ತು: 1"ಭಾರತ (ಇಂಡಿಯಾ) ದೇಶ ಮೊದಲ್ಗೊಂಡು ಇಥಿಯೋಪಿಯಾ ದೇಶದವರೆಗೆ ವಿಸ್ತರಿಸಿರುವ 127 ಸಂಸ್ಥಾನಗಳ ಅಧಿಪತಿಗಳಿಗೆ, ಹಾಗೂ ರಾಜನಿಷ್ಠ ಪ್ರಜೆಗಳಿಗೆ ಮಹಾರಾಜ ಅಹಷ್ವೇರೋಷನು ಶುಭಕೋರಿ ಬರೆಯುವ ಪತ್ರ:

2 "ತಮ್ಮ ಉದಾರ ದಾನಿಗಳ ಅಪಾರ ಗೌರವಾದರಗಳ ಫಲವಾಗಿ ಉನ್ನತಸ್ಥಾನಕ್ಕೇರಿದ ಕೆಲವರು ಕೃತಜ್ಞರಾಗಿ ಬಾಳುವ ಬದಲು ಮತ್ತಷ್ಟು ಉದ್ಧಟತನದಿಂದ ವರ್ತಿಸುವುದುಂಟು. 3ಅಂಥವರು ತಮ್ಮ ಸುಯೋಗದ ಸಮೃದ್ಧಿಯಲ್ಲಿ ತೃಪ್ತರಾಗಿರದೆ, ತಮ್ಮ ಏಳಿಗೆಗೆ ಕಾರಣರಾದ ಉದಾರ ದಾನಿಗಳನ್ನೇ ಉರುಳಿಸಲು ಪಿತೂರಿ ನಡೆಸುತ್ತಾರೆ. 4ಮಾನವ ಸಹಜವಾದ ಕೃತಜ್ಞತಾ ಭಾವವನ್ನು ಅಳಿಸುವುದರೊಂದಿಗೆ, ಸಭ್ಯತೆಯ ಗಂಧವನ್ನೇ ಅರಿಯದ ಹೊಗಳುಭಟ್ಟರ ಮಾತುಗಳಿಗೆ ಮಾರುಹೋಗುತ್ತಾರೆ. ಮಾತ್ರವಲ್ಲ, ಸಕಲವನ್ನೂ ಈಕ್ಷಿಸುವಂಥ, ಕೇಡನ್ನು ದ್ವೇಷಿಸುವಂಥ ದೇವರ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳಬಹುದೆಂದು ಭಾವಿಸುತ್ತಾರೆ.

5 "ಅನೇಕ ಸಾರಿ ಆಡಳಿತ ಜವಾಬ್ದಾರಿ ವಹಿಸಿಕೊಂಡಿರುವವರು ನಿರಪರಾಧಿಗಳ ರಕ್ತಧಾರೆಗೆ ಹೊಣೆಗಾರರಾಗುತ್ತಾರೆ. ಬಗೆಹರಿಸಲಾಗದ ವಿಪತ್ತನ್ನು ಜನರ ಮೇಲೆ ಬರಮಾಡುತ್ತಾರೆ. 6ಈ ವ್ಯಕ್ತಿಗಳು ಅಧಿಕಾರಿಗಳ ಉದಾರ ಮನಸ್ಸನ್ನು ದುರುಪಯೋಗಿಸಿಕೊಂಡು, ನೀಚತನದಿಂದ ಅವರ ಸದುದ್ದೇಶಗಳಿಗೆ ಭಂಗತರುತ್ತಾರೆ.

7 "ಈ ರೀತಿಯ ಅಧಿಕಾರ ದುರುಪಯೋಗದ ನಿದರ್ಶನಗಳನ್ನು ಕಾಣುವುದಕ್ಕೆ ಇತಿಹಾಸದ ದಾಖಲೆಗಳು ಬೇಕಾಗಿಲ್ಲ, ನಮ್ಮ ಮಧ್ಯೆ ಜರುಗಿ ಇರುವ ಇತ್ತೀಚಿನ ವ್ಯವಹಾರಗಳಲ್ಲೆ ತನಿಖೆ ನಡೆಸಿದಾಗ ಎಷ್ಟರಮಟ್ಟಿಗೆ ಅಯೋಗ್ಯ ಅಧಿಕಾರಿಗಳಿಂದ ಎಂಥ ದುಷ್ಕೃತ್ಯಗಳು ನಡೆದಿವೆ ಎಂಬುದು ಕಂಡುಬರುತ್ತದೆ.

8 "ಇನ್ನು ಮುಂದೆ ನಮ್ಮ ರಾಜ್ಯದ ಪ್ರಜೆಗಳೆಲ್ಲರೂ ಸುರಕ್ಷತೆ, ಸಮಾಧಾನದಿಂದ ಬಾಳಲು ಸಾಧ್ಯವಾಗುವಂತೆ ಸುಧಾರಣಾ ಕ್ರಮವನ್ನು ಕೈಗೊಳ್ಳಲು ನಿರ್ಧರಿಸಿದ್ದೇವೆ. 9ಇದಕ್ಕಾಗಿ ನಮ್ಮ ಕಾರ್ಯನೀತಿಯನ್ನು ಬದಲಾಯಿಸಿ, ನಮ್ಮ ಗಮನಕ್ಕೆ ಬಂದಿರುವ ವಿಷಯಗಳನ್ನು ನಿಷ್ಪಕ್ಷಪಾತದಿಂದ ಪರಿಶೀಲಿಸಿ, ಹೊಸ ವಿಧಿವಿಧಾನಗಳನ್ನು ಜಾರಿಗೆ ತರಲು ಅಪೇಕ್ಷಿಸುತ್ತೇವೆ.

10 “ಉದಾಹರಣೆಗಾಗಿ, ಮ್ಯಾಸಿಡೋನಿಯಾ ಹೆಮ್ಮೆದಾತನ ಮಗ ಹಾಮಾನನನ್ನು ತೆಗೆದುಕೊಳ್ಳೋಣ. ಅವನಲ್ಲಿ ಸ್ವಲ್ಪವೂ ಪರ್ಷಿಯನ್ನರ ರಕ್ತವಿರಲಿಲ್ಲ. ನಮ್ಮ ಆಶ್ರಯದಲ್ಲಿರಲು ಅವನಿಗೆ ಎಳ್ಳಷ್ಟೂ ಹಕ್ಕಿರಲಿಲ್ಲ. ಆದರೂ ಅವನಿಗೆ ಆಶ್ರಯವಿತ್ತೆವು. 11ಇತರ ಜನಾಂಗಗಳವರ ಮೇಲೆ ತಳೆದಿರುವ ಮನೋಭಾವದಿಂದ ಅವನನ್ನೂ ನೋಡಿಕೊಂಡೆವು. ಅಷ್ಟೇ ಅಲ್ಲ, ನಮ್ಮ ಚಕ್ರಾಧಿಪತ್ಯಕ್ಕೆಲ್ಲಾ, ‘ತಂದೆ’ ಎಂದು ಘೋಷಿಸಿದೆವು. ಮಹಾರಾಜರನ್ನು ಬಿಟ್ಟಷ್ಟೆ, ಎಲ್ಲಕ್ಕಿಂತಲೂ ಹೆಚ್ಚಿನ ಮರ್ಯಾದೆ ಅವನಿಗಿತ್ತು, ಏಕೆಂದರೆ ಅವನು ಆಸ್ಥಾನದಲ್ಲಿ ದ್ವಿತೀಯ ಸ್ಥಾನವನ್ನು ಅಲಂಕರಿಸುವಂತೆ ಮಾಡಿದೆವು.

12 “ಆದರೆ ಈ ಹಾಮಾನನ ಉದ್ಧಟತನಕ್ಕೆ ಮಿತಿಯಿಲ್ಲವಾಯಿತು. ಅವನು ನಮ್ಮ ರಾಜ್ಯವನ್ನೂ ಪ್ರಾಣವನ್ನೂ ಕಸಿದುಕೊಳ್ಳಲು ಹವಣಿಸಿದ್ದಾನೆ. 13ನನ್ನ ಪ್ರಾಣವನ್ನು ಕಾಪಾಡಿ, ನನಗೆ ಬೆಂಬಲವಾಗಿ ನಿಂತಿದ್ದ ಮೊರ್ದೆಕೈಯನ್ನು ವಂಚನೆ ತಂತ್ರೋಪಾಯಗಳಿಂದ ಗಲ್ಲಿಗೇರಿಸಲು ಪ್ರಯತ್ನಿಸಿದ್ದಾನೆ. ಅಷ್ಟೇ ಅಲ್ಲ, ನಿರ್ದೋಷಿ ಆದ ಪಟ್ಟದರಾಣಿ ಎಸ್ತೇರಳನ್ನೂ ಇಡೀ ಯೆಹೂದ್ಯ ಜನಾಂಗವನ್ನೂ ನಿರ್ಮೂಲಗೊಳಿಸಲು ಒಳಸಂಚು ಮಾಡಿದ್ದಾನೆ. 14ನಮ್ಮನ್ನು ನಿಸ್ಸಹಾಯಕರನ್ನಾಗಿ ಮಾಡಿ, ಪರ್ಷಿಯಾ ರಾಜ್ಯವನ್ನು ಮ್ಯಾಸಿಡೋನಿಯರ ವಶಕ್ಕೆ ಒಪ್ಪಿಸಬೇಕೆಂಬ ಉದ್ದೇಶ ಅವನದಾಗಿತ್ತು. 15ಆದರೆ ಈ ನತದೃಷ್ಟನಿಂದ ವಿನಾಶಕ್ಕೆ ಗುರಿಪಡಿಸಲಾಗಿದ್ದ ಯೆಹೂದ್ಯರು ಖಂಡಿತವಾಗಿಯೂ ಸಮಾಜದ್ರೋಹಿಗಳಲ್ಲ, ನ್ಯಾಯಸಮ್ಮತವಾದ ನೇಮ ನಿಯಮಗಳನ್ನು ಪಾಲಿಸುವಂಥವರು ಎಂದು ಕಂಡುಬಂದಿದೆ. 16ನಮ್ಮ ಪೂರ್ವಜರ ಕಾಲದಿಂದ ಇದುವರೆಗೆ ನಮ್ಮ ಘನರಾಜ್ಯವನ್ನು ಅದ್ಭುತಕರವಾದ ರೀತಿಯಲ್ಲಿ ಪರಿಪಾಲಿಸಿಕೊಂಡು ಬಂದಿರುವ ನಿತ್ಯ ಹಾಗೂ ಮಹೋನ್ನತ ದೇವರ ಮಕ್ಕಳು ಅವರು.

17 “ಹೀಗಿರಲಾಗಿ, ಹೆಮ್ಮೆದಾತನ ಮಗ ಹಾಮಾನನು ಪತ್ರಗಳ ಮೂಲಕ ಘೋಷಿಸಿರುವ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಬಾರದೆಂಬುದು ನಮ್ಮ ಆಜ್ಞೆ. 18ಇಂಥ ಸಂದಿಗ್ಧ ಪರಿಸ್ಥಿತಿಗೆ ಮೂಲ ಕಾರಣನಾಗಿದ್ದ ಅವನನ್ನೂ ಅವನ ಕುಟುಂಬದವರನ್ನೂ ಶೂಷನ್ ನಗರದ ಮಹಾದ್ವಾರದ ಬಳಿ ಗಲ್ಲಿಗೇರಿಸಲಾಗಿದೆ. ಸಕಲವನ್ನು ಪರಿಪಾಲಿಸುವ ದೇವರಿಂದ ಅವನಿಗೆ ತ್ವರಿತವಾಗಿ ತಕ್ಕ ಶಾಸ್ತಿಯಾಗಿದೆ.

19 “ಈ ಪತ್ರದ ನಕಲನ್ನು ಪ್ರತಿಯೊಂದು ಸಾರ್ವಜನಿಕ ಸ್ಥಳದಲ್ಲಿ ಪ್ರಕಟಿಸಬೇಕು. ತಮ್ಮ ಸಂಪ್ರದಾಯಕ್ಕನುಸಾರವಾಗಿ ನಿರ್ಭೀತಿಯಿಂದ ನಡೆದುಕೊಳ್ಳಲು ಯೆಹೂದ್ಯರಿಗೆ ಅನುಮತಿ ನೀಡಬೇಕು.

20 “ಆಗಲೇ ತಿಳಿಸಿದ ಪ್ರಕಾರ, ಹನ್ನೆರಡನೇ ತಿಂಗಳಾದ ಫಾಲ್ಗುಣ ಮಾಸದ ಹದಿಮೂರನೇ ದಿನ ಯಾರಾದರೂ ಅವರ ಮೇಲೆ ಧಾಳಿಮಾಡಿದರೆ, ನೀವು ಅವರಿಗೆ ಬೆಂಬಲವಾಗಿದ್ದು ರಕ್ಷಣೆ ನೀಡಬೇಕು. 21ಸಕಲವನ್ನು ಪರಿಪಾಲಿಸುವ ದೇವರ ಕರುಣೆಯಿಂದ ಆಯ್ಕೆಯಾದ ಈ ಜನರಿಗೆ ವಿನಾಶದ ದಿನವು ಸಂತೋಷದ ದಿನವಾಗಿ ಪರಿಣಮಿಸಿದೆ.

22 “ಎಂತಲೇ, ಈ ದಿನವನ್ನು ರಾಷ್ಟ್ರೀಯ ರಜಾದಿನಗಳ ಪಟ್ಟಿಗೆ ಸೇರಿಸಿ, ಅದನ್ನು ಸಂತೋಷದಿಂದ ಸಂಭ್ರಮದಿಂದ ಕೊಂಡಾಡಿರಿ. 23ಇಂದಿನಿಂದ ಈ ದಿನ, ನಿಮಗೆ ಮತ್ತು ಸದ್ಭಾವನೆಯುಳ್ಳ ಪರ್ಷಿಯಾದವರಿಗೆ ರಕ್ಷಣೆಯ ನೆನಪಾಗಿಯೂ, ನಮಗೆ ವಿರೋಧವಾಗಿ ಪಿತೂರಿ ನಡೆಸಿದ ದ್ರೋಹಿಗಳಿಗೆ ವಿನಾಶದ ನೆನಪಾಗಿಯೂ ಇರಲಿ.

24 “ಈ ಆಜ್ಞೆಗಳನ್ನು ಉಲ್ಲಂಘಿಸುವ ಪ್ರತಿಯೊಂದು ಪ್ರಾಂತ್ಯ ಪ್ರತಿಯೊಂದು ನಗರವೂ ನನ್ನ ಕೋಪಕ್ಕೆ ಗುರಿಯಾಗುವುದು; ನಿರ್ದಯೆಯಿಂದ ಕತ್ತಿಗೂ ಬೆಂಕಿಗೂ ತುತ್ತಾಗುವುದು; ಯಾವ ಮನುಷ್ಯನೂ ಅದರ ಬಳಿಗೆ ಹೋಗಲಾರ. ಪ್ರಾಣಿ–ಪಕ್ಷಿಗಳು ಸಹ ಅಲ್ಲಿ ಸುಳಿಯಲಾರವು.

**8** 13“ಈ ಪತ್ರದ ಪ್ರತಿಯನ್ನು ಪ್ರತಿಯೊಂದು ಸಂಸ್ಥಾನದಲ್ಲಿ ರಾಜಾಜ್ಞೆಯೆಂದು ಎಲ್ಲಾ ಜನರಲ್ಲಿ ಪ್ರಕಟಿಸಬೇಕು. ಆ ದಿನಗಳಲ್ಲಿ ಯೆಹೂದ್ಯರು ತಮ್ಮ ಶತ್ರುಗಳ ಮೇಲೆ ಮುಯ್ಯಿ ತೀರಿಸಿಕೊಳ್ಳುವುದಕ್ಕೂ ಸನ್ನದ್ಧರಾಗಿರಬೇಕು.” 14ಅರಸನ ಈ ರಾಜಾಜ್ಞೆಯು ಶೂಷನ್ ನಗರದಲ್ಲಿ ಪ್ರಕಟವಾದ ಕೂಡಲೆ ಅದರಿಂದ ಪ್ರೇರಿತವಾದ ಅಂಚೆಯವರು ಅರಮನೆಯ ಸವಾರಿ ಕುದುರೆಗಳನ್ನೇರಿ ಅತಿ ಶೀಘ್ರವಾಗಿ ಧಾವಿಸಿದರು.

15 ಮೊರ್ದೆಕೈಯಾದರೋ ನೀಲ ಶುಭ್ರ ವರ್ಣಗಳುಳ್ಳ ರಾಜವಸ್ತ್ರಗಳನ್ನು ಧರಿಸಿ, ಬಂಗಾರದ ದೊಡ್ಡ ಪಟ್ಟಿಯನ್ನು ಹಣೆಗೆ ಕಟ್ಟಿಕೊಂಡು ರಕ್ತವರ್ಣದ ನಾರಿನ ಶಾಲನ್ನು ಹೊದ್ದು ರಾಜಸನ್ನಿಧಿಯಿಂದ ಹೊರಟನು. ಶೂಷನ್ ನಗರದಲ್ಲಿ ಹರ್ಷೋದ್ಗಾರ ಮೊಳಗಿತು. 16ಅಲ್ಲಿನ ಯೆಹೂದ್ಯರು ಹರ್ಷಾನಂದ ಪ್ರಭಾವಗಳಿಂದ ಪುಳಕಿತರಾದರು. 17ರಾಜ ನಿರ್ಣಯ ಶಾಸನಗಳು ಪ್ರಕಟವಾದ ಸಂಸ್ಥಾನಗಳಲ್ಲೂ ನಗರಗಳಲ್ಲೂ ವಾಸಿಸುತ್ತಿದ್ದ ಯೆಹೂದ್ಯರೆಲ್ಲರಿಗೆ ಶುಭದಿನ ಉದಯವಾಯಿತು. ಅವರು ಅದನ್ನು ಸಂತೋಷದ ಹಾಗೂ ಸಂಭ್ರಮದ ಹಬ್ಬದ ದಿನವನ್ನಾಗಿ ಆಚರಿಸಿದರು. ಜನರಲ್ಲಿ ಅನೇಕರು ಯೆಹೂದ್ಯರಿಗೆ ಭಯಪಟ್ಟು ಅವರ ಧರ್ಮಕ್ಕೆ ಸೇರಿದರು.

### ಯೆಹೂದ್ಯರಿಂದ ಶತ್ರುಗಳಿಗೆ ಸೋಲು

**9** ಅರಸನ ಆಜ್ಞೆಯನ್ನು, ನಿರ್ಣಯವನ್ನು ನೆರವೇರಿಸತಕ್ಕ ದಿನವು ಅಂದರೆ, ಹನ್ನೆರಡನೆಯ ತಿಂಗಳಾದ ಫಾಲ್ಗುಣ ಮಾಸದ ಹದಿಮೂರನೆಯ ದಿನವು ಬಂದಿತು. ಆ ದಿನದಲ್ಲಿ ಯೆಹೂದ್ಯರನ್ನು ತಾವೇ ಸ್ವಾಧೀನ ಪಡಿಸಿಕೊಳ್ಳಬಹುದೆಂದು ಅವರ ವೈರಿಗಳು ನಿರೀಕ್ಷಿಸಿದ್ದರು. ಆದರೆ ಅದಕ್ಕೆ ಬದಲಾಗಿ ಯೆಹೂದ್ಯರೇ ತಮ್ಮ ವೈರಿಗಳನ್ನು ಸ್ವಾಧೀನ ಮಾಡಿಕೊಂಡರು.

2 ಆದುದರಿಂದ ಅರಸ ಅಹಷ್ವೇರೋಷನ ಸಮಸ್ತ ಸಂಸ್ಥಾನಗಳ ಪ್ರತಿಯೊಂದು ನಗರದಲ್ಲೂ ಯೆಹೂದ್ಯರು ತಮಗೆ ಕೇಡು ಬಗೆದವರಿಗೆ ವಿರುದ್ಧವಾಗಿ ಕೈಯೆತ್ತಲು ಒಟ್ಟಾಗಿ ಸೇರಿದರು. ಎಲ್ಲರಿಗೂ ಅವರ ಭಯವಿದ್ದುದರಿಂದ ಯಾರೂ ಅವರ ಮುಂದೆ ನಿಲ್ಲಲಾಗಲಿಲ್ಲ. 3ಇದಲ್ಲದೆ ಅರಮನೆಯಲ್ಲಿ ಮೊರ್ದೆಕೈಯ ಅಧಿಕಾರ ದಿನೇದಿನೇ ಪ್ರಬಲವಾಗುತ್ತಾ ಬಂದುದರಿಂದ ಅವನ ಕೀರ್ತಿ ಎಲ್ಲಾ ಸಂಸ್ಥಾನಗಳಲ್ಲಿಯೂ ಹಬ್ಬಿತು. 4ಆದುದರಿಂದ ಸಕಲ ಸಂಸ್ಥಾನಾಧಿಕಾರಿಗಳೂ ಉಪರಾಜರೂ ದೇಶಾಧಿಪತಿಗಳೂ ಮತ್ತು ಇತರ ರಾಜಸೇವಕರೂ ಅವನಿಗೆ ಭಯಪಟ್ಟು ಯೆಹೂದ್ಯರಿಗೆ ನೆರವಾದರು. 5ಹೀಗಾಗಿ ಯೆಹೂದ್ಯರು ತಮ್ಮ ವೈರಿಗಳನ್ನೆಲ್ಲಾ ಸೋಲಿಸಿ, ಕತ್ತಿಯಿಂದ ಇರಿದು, ಕೊಂದು, ನಿರ್ನಾಮಗೊಳಿಸಿದರು. ತಮ್ಮನ್ನು ಹಗೆಮಾಡುತ್ತಿದ್ದ ಶತ್ರುಗಳಿಗೆ ತಮ್ಮ ಇಷ್ಟಾನುಸಾರ ಮಾಡಿದರು.

6 ಶೂಷನ್ ನಗರದಲ್ಲೇ ಐನೂರು ಮಂದಿ ಹತರಾದರು.7–10ಹತರಾದವರಲ್ಲಿ ಯೆಹೂದ್ಯರ ವೈರಿಯಾಗಿದ್ದ ಹೆಮ್ಮೆದಾತನ ಮಗ ಹಾಮಾನನ ಹತ್ತುಮಂದಿ ಮಕ್ಕಳೂ ಇದ್ದರು. ಅವರ ಹೆಸರುಗಳು ಯಾವುವೆಂದರೆ ಪರ್ಷಂದಾತ, ದಲ್ಫೋನ್, ಅಸ್ಪಾತ, ಪೋರಾತ, ಅದಲ್ಯ, ಅರೀದಾತ, ಪರ್ಮಷ್ಟ, ಅರೀಸೈ, ಅರಿದೈ, ವೈಜಾತ. ಇಷ್ಟು ಮಂದಿಯನ್ನು ಕೊಂದರೂ ಯೆಹೂದ್ಯರು ಸುಲಿಗೆಗೆ ಕೈ ಹಾಕಲಿಲ್ಲ.

11 ಆ ದಿನ ಶೂಷನ್ ನಗರದಲ್ಲಿ ಹತರಾದವರ ಸಂಖ್ಯೆ ಅರಸನಿಗೆ ತಿಳಿದು ಬಂದಾಗ ಅವನು ಎಸ್ತೇರ್ ರಾಣಿಗೆ, 12“ಯೆಹೂದ್ಯರು ಶೂಷನ್ ನಗರದಲ್ಲೇ ಐನೂರು ಮಂದಿಯನ್ನೂ ಹಾಮಾನನ ಹತ್ತು ಮಕ್ಕಳನ್ನೂ ಸಂಹರಿಸಿಬಿಟ್ಟಿದ್ದಾರೆ. ಉಳಿದ ರಾಜಸಂಸ್ಥಾನಗಳಲ್ಲಿ ಇನ್ನೆಷ್ಟು ಮಂದಿಯನ್ನು ಹತಮಾಡಿರಬಹುದೋ! ನಿನ್ನ ವಿಜ್ಞಾಪನೆ ಯಾವುದಿದ್ದರೂ ನೆರವೇರಿಸುವೆನು ಹೇಳು, ನೀನು ಏನು ಕೇಳಿದರೂ ಕೊಡುವೆನು ಕೇಳು,” ಎಂದನು.

13 ಪ್ರತ್ಯುತ್ತರವಾಗಿ ಎಸ್ತೇರಳು ಅರಸನಿಗೆ, “ಇಂದಿನಂತೆ ನಾಳೆಯೂ ರಾಜಾಜ್ಞೆಯು ಜಾರಿಯಲ್ಲಿರಬೇಕು ಹಾಗೂ ಹಾಮಾನನ ಹತ್ತು ಮಕ್ಕಳ ಶವಗಳನ್ನು ಗಲ್ಲಿಗೇರಿಸುವಂತೆ ಅಪ್ಪಣೆ ಆಗಬೇಕು,” ಎಂದು ಬೇಡಿಕೊಂಡಳು. 14ಅರಸನು, ಎಸ್ತೇರಳು ತನ್ನ ಇಚ್ಛೆಯಂತೆ ಮಾಡಬಹುದೆಂದು ಅಪ್ಪಣೆಕೊಟ್ಟನು. ಕೂಡಲೆ ಇದಕ್ಕೆ ಸಂಬಂಧಪಟ್ಟ ರಾಜಾಜ್ಞೆ ಶೂಷನ್ ನಗರದಲ್ಲಿ ಪ್ರಕಟವಾಯಿತು. ಹಾಮಾನನ ಹತ್ತು ಮಂದಿ ಮಕ್ಕಳ ಶವಗಳನ್ನು ಗಲ್ಲಿಗೇರಿಸಲಾಯಿತು. 15ಶೂಷನಿನ ಯೆಹೂದ್ಯರು ಫಾಲ್ಗುಣ ಮಾಸದ ಹದಿನಾಲ್ಕನೆಯ ದಿನದಂದೂ ಒಟ್ಟಾಗಿ ಸೇರಿ ಮುನ್ನೂರು ಮಂದಿಯನ್ನು ಕೊಂದು ಹಾಕಿದರು. ಆದರೆ ಸುಲಿಗೆಗೆ ಕೈಹಾಕಲಿಲ್ಲ.

16 ಹಾಗೆಯೆ ಇತರ ರಾಜಸಂಸ್ಥಾನಗಳಲ್ಲೂ ಯೆಹೂದ್ಯರು ತಮ್ಮ ವಿರೋಧಿಗಳ ಕಾಟವನ್ನು ನಿಲ್ಲಿಸಿ, ತಮ್ಮ ಪ್ರಾಣರಕ್ಷಣೆಗಾಗಿ ಒಟ್ಟಾಗಿ ಸೇರಿ ತಮ್ಮ ವೈರಿಗಳಲ್ಲಿ ಎಪ್ಪತ್ತೈದು ಸಾವಿರ ಮಂದಿಯನ್ನು ಕೊಂದು ಹಾಕಿದರು. ಆದರೆ ಸುಲಿಗೆಗೆ ಕೈಹಾಕಲಿಲ್ಲ. 17ಇದು ಫಾಲ್ಗುಣ ಮಾಸದ ಹದಿಮೂರನೆಯ ದಿನ ನಡೆಯಿತು.

ಅವರು ಹದಿನಾಲ್ಕನೆಯ ದಿನದಂದು ವಿಶ್ರಮಿಸಿದರು. ಅಂದು ಸಂಭ್ರಮದ ಉತ್ಸವ ದಿನವನ್ನಾಗಿ ಆಚರಿಸಿದರು.

18 ಶೂಷನಿನ ಯೆಹೂದ್ಯರು ಹದಿಮೂರನೆ ಹಾಗೂ ಹದಿನಾಲ್ಕನೆ ದಿನ ಒಟ್ಟಾಗಿ ಸೇರಿ ಬಂದುದರಿಂದ, ಅವರು ಹದಿನೈದನೆಯ ದಿನದಲ್ಲಿ ವಿಶ್ರಮಿಸಿಕೊಂಡರು. ಅಂದು ಸಂಭ್ರಮದ ಉತ್ಸವ ದಿನವನ್ನಾಗಿ ಆಚರಿಸಿದರು. 19ಈ ಕಾರಣದಿಂದಾಗಿ ಬಯಲುಪ್ರದೇಶದ ಗ್ರಾಮ ನಿವಾಸಿ ಯೆಹೂದ್ಯರು ಹದಿನಾಲ್ಕನೆ ದಿನವನ್ನು ಶುಭದಿನ ಎಂತಲೂ ನಗರವಾಸಿ ಯೆಹೂದ್ಯರು ಹದಿನೈದನೆಯ ದಿನವನ್ನು ಶುಭದಿನವೆಂತಲೂ ಆಚರಿಸಿ, ಉತ್ಸವ ಭೋಜನ ಮಾಡಿ ಒಬ್ಬರಿಗೊಬ್ಬರು ತಿಂಡಿತೀರ್ಥಗಳನ್ನು ವಿನಿಮಯಿಸಿ ಕೊಳ್ಳುತ್ತಾರೆ.

**ಪೂರಿಮ್ ಹಬ್ಬ**

20 ಮೊರ್ದೆಕೈಯು ಅಹಷ್ವೇರೋಷನ ಸಂಸ್ಥಾನಗಳಲ್ಲಿ ವಾಸಿಸುತ್ತಿದ್ದ ಎಲ್ಲಾ ಯೆಹೂದ್ಯರಿಗೆ, ಸಮೀಪದಲ್ಲೂ ದೂರದಲ್ಲೂ ಇದ್ದವರೆಲ್ಲರಿಗೂ ಪತ್ರಗಳ ಮುಖಾಂತರ ಈ ಕೆಳಕಂಡ ಸಂಗತಿಗಳನ್ನು ತಿಳಿಯಪಡಿಸಿದನು. 21ಪ್ರತಿ ವರ್ಷವೂ ಫಾಲ್ಗುಣಮಾಸದ ಹದಿನಾಲ್ಕನೆ ಮತ್ತು ಹದಿನೈದನೆಯ ದಿನಗಳನ್ನು ಹಬ್ಬದ ದಿನಗಳಾಗಿ ಆಚರಿಸುವುದು ಶಾಶ್ವತ ನಿಯಮ ಎಂದು ಭಾವಿಸಬೇಕು; 22ಆ ದಿನಗಳಲ್ಲಿ ಯೆಹೂದ್ಯರಿಗೆ ಶತ್ರುಗಳ ಕಾಟ ತಪ್ಪಿ ವಿಶ್ರಾಂತಿ ದೊರೆಯಿತು. ಆ ತಿಂಗಳಿನಲ್ಲಿ ಸಂತಾಪವು ಪರಿಹಾರವಾಗಿ ಸಂತೋಷ ಪ್ರಾಪ್ತಿಯಾಯಿತು, ದುಃಖವು ಕಳೆದು ಸುಖಕಾಲ ಬಂದಿತು. ಆದ್ದರಿಂದ ಆ ದಿನಗಳಲ್ಲಿ ಉತ್ಸವ ಭೋಜನ ಮಾಡಿ ಪರಸ್ಪರ ತಿಂಡಿ ತೀರ್ಥಗಳನ್ನು ವಿನಿಮಯ ಮಾಡಿಕೊಳ್ಳಬೇಕು ಹಾಗೂ ಬಡಬಗ್ಗರಿಗೆ ದಾನಧರ್ಮ ಮಾಡಬೇಕು. 23ಮೊರ್ದೆಕೈಯ ಪತ್ರದಲ್ಲಿ ನಿರೂಪಿತವಾಗಿದ್ದ ಪ್ರಕಾರ ಯೆಹೂದ್ಯರು ಅನುಸರಿಸಿದರು. ಅಂದಿನ ವರ್ಷ ಆಚರಿಸಿದ ಹಬ್ಬವು ತಮ್ಮಲ್ಲಿ ವಾರ್ಷಿಕೋತ್ಸವವಾಗಿ ಊರ್ಜಿತಗೊಳ್ಳಬೇಕೆಂದು ತೀರ್ಮಾನಿಸಿಕೊಂಡರು.

24 ಯೆಹೂದ್ಯರೆಲ್ಲರ ಕಡುವೈರಿಯಾಗಿದ್ದ ಆಗಾನನ ವಂಶದವನೂ ಹೆಮ್ಮೆದಾತನ ಮಗನೂ ಆದ ಹಾಮಾನನು ಯೆಹೂದ್ಯರನ್ನು ಸಂಹರಿಸಬೇಕೆಂದು ತೀರ್ಮಾನಿಸಿಕೊಂಡು ಅವರನ್ನು ಹಾಳು ಮಾಡಲು, ನಿರ್ನಾಮಗೊಳಿಸಲು 'ಪೂರನ್ನು' ಅಂದರೆ ಚೀಟನ್ನು ಹಾಕಿದ್ದನು. 25ಈ ವಿಷಯ ಅರಸನ ಕಿವಿಗೆ ಬಿದ್ದಾಗ, ಅವನು– "ಹಾಮಾನನು ಯೆಹೂದ್ಯರ ವಿರುದ್ಧ ಯೋಚಿಸಿದ ಕೇಡು ಅವನ ತಲೆಯ ಮೇಲೆಯೆ ಬರಲಿ. ಅವನನ್ನು ಅವನ ಮಕ್ಕಳನ್ನೂ ಗಲ್ಲಿಗೇರಿಸಿರಿ," ಎಂದು ಅಪ್ಪಣೆ ಮಾಡಿದ್ದನು. 26ಆ ಪೂರ್ ಎಂಬ ಪದದ ಆಧಾರದ ಮೇಲೆ ಆ ದಿನಗಳಿಗೆ 'ಪೂರಿಮ್' ಎಂಬ ಹೆಸರಾಯಿತು. ಅರಸನು ಪತ್ರದಲ್ಲಿ ಬರೆದ ಮಾತುಗಳನ್ನು, ಅವುಗಳ ಸಂಬಂಧವಾಗಿ ತಾವೇ ಸ್ವತಃ ಅನುಭವಿಸಿದ್ದನ್ನು, ತಮಗೆ ಸಂಭವಿಸಿದ್ದನ್ನು ಸ್ಮರಿಸಿಕೊಂಡು ಪ್ರತಿವರ್ಷವೂ ಆ ಎರಡು ದಿನಗಳನ್ನು 27ಅವುಗಳಿಗೆ ಸಂಬಂಧಪಟ್ಟ ಶಾಸನದ ಪ್ರಕಾರ ನಿಯಮಿತ ಕಾಲದಲ್ಲಿ ಆಚರಿಸಬೇಕೆಂದು ತೀರ್ಮಾನಿಸಿಕೊಂಡರು. ಅದು ತಮ್ಮಲ್ಲಿಯೂ ತಮ್ಮ ಸಂತಾನದವರಲ್ಲಿಯೂ, ತಮ್ಮೊಂದಿಗೆ ಸೇರಿಕೊಳ್ಳುವವರಲ್ಲಿಯೂ ಮೀರಕೂಡದ ಪದ್ಧತಿ ನಿಯಮಗಳಾಗಬೇಕು ಎಂದು, 28ಯುಗಯುಗಾಂತರಕ್ಕೂ ಎಲ್ಲಾ ಗೋತ್ರಸಂಸ್ಥಾನ ನಗರದವರು ಈ ದಿನಗಳನ್ನು ಸ್ಮರಿಸಿ ಆಚರಿಸಬೇಕೆಂದು ಹಾಗೂ ಈ ಪೂರಿಮ್ ಹಬ್ಬವು ಯೆಹೂದ್ಯರಲ್ಲಿ ಎಂದಿಗೂ ನಿಂತು ಹೋಗಬಾರದು, ಅದರ ಸ್ಮರಣೆ ಅವರ ಸಂತಾನದವರಲ್ಲಿ ಅಳಿದು ಹೋಗಲೇ ಬಾರದೆಂದು ತೀರ್ಮಾನಿಸಿಕೊಂಡರು.

29 ಇದಲ್ಲದೆ ಅಬೀಹೈಲನ ಮಗಳಾದ ಎಸ್ತೇರ್ ರಾಣಿಯು ಪೂರಿಮ್ ಹಬ್ಬದ ಆಚರಣೆಗೆ ಸಂಬಂಧಪಟ್ಟ ಆ ಎರಡನೇ ಶಾಸನವನ್ನು ದೃಢಪಡಿಸುವುದಕ್ಕಾಗಿ ಮೊರ್ದೆಕೈಯ ಸಹಾಯವನ್ನು ಪಡೆದು ಅಧಿಕೃತ ಪತ್ರಗಳನ್ನು ಬರೆದಳು. 30ಮೊರ್ದೆಕೈ, ಅಹಷ್ವೇರೋಷನ ರಾಜ್ಯದ ನೂರ ಇಪ್ಪತ್ತೇಳು ಸಂಸ್ಥಾನಗಳಲ್ಲಿ ವಾಸಿಸುತ್ತಿದ್ದ ಯೆಹೂದ್ಯರೆಲ್ಲರಿಗೂ ಆ ಪತ್ರಗಳನ್ನು ಕಳುಹಿಸಿದನು. 31ದಯೆ ಹಾಗೂ ಸತ್ಯತೆಯ ಮಾತುಗಳಿಂದ ತುಂಬಿದ್ದ ಆ ಪತ್ರಗಳಲ್ಲಿ ಎಸ್ತೇರಳು "ಯೆಹೂದ್ಯರು ತಾವೂ ತಮ್ಮ ಸಂತತಿಯವರೆಲ್ಲರೂ ಉಪವಾಸ ಪ್ರಲಾಪ ದಿನಗಳನ್ನು ಪ್ರತಿವರ್ಷ ತಪ್ಪದೆ ಆಚರಿಸಬೇಕೆಂದು ತಾವೇ

ಗೊತ್ತುಮಾಡಿಕೊಂಡ ಪ್ರಕಾರ ಈ ಪೂರಿಮ್ ದಿನಗಳನ್ನು ತನ್ನ ಮತ್ತು ಯೆಹೂದ್ಯನಾದ ಮೊರ್ದೆಕೈಯನ ಆದೇಶದಂತೆ ಪ್ರತಿವರ್ಷವೂ ನಿಯಮಿತ ಕಾಲದಲ್ಲಿ ತಪ್ಪದೆ ಆಚರಿಸಬೇಕು," ಎಂದು ಬರೆದಿದ್ದಳು. 32ಎಸ್ತೇರಳು ಹೊರಡಿಸಿದ ಈ ನಿರೂಪ ಪೂರಿಮ್ ಹಬ್ಬದ ಆಚರಣೆಯನ್ನು ಸ್ಥಾಪಿಸಿತು ಮತ್ತು ಅದು ಗ್ರಂಥದಲ್ಲೂ ಲಿಖಿತವಾಯಿತು.

## ಅರಸ ಅಹಷ್ವೇರೋಷನ ಹಾಗೂ ಮೊರ್ದೆಕೈನ ಹಿರಿಮೆ

**10** ಅರಸ ಅಹಷ್ವೇರೋಷನು ತನ್ನ ರಾಜ್ಯಕ್ಕೆ ಸೇರಿದ ಎಲ್ಲಾ ದೇಶಗಳ ಮೇಲೂ ಸಮುದ್ರ ದ್ವೀಪಗಳ ಮೇಲೂ ತೆರಿಗೆಯನ್ನು ವಿಧಿಸಿದನು.

2 ಅವನ ಶಕ್ತಿಸಾಮರ್ಥ್ಯದ ಸಾಹಸ ಕಾರ್ಯಗಳೆಲ್ಲವೂ ಹಾಗೂ ಅರಸನು ಮೊರ್ದೆಕೈಯನ್ನು ಅತ್ಯುನ್ನತ ಗೌರವಸ್ಥಾನಕ್ಕೆ ಏರಿಸಿದ್ದನ್ನು ಕುರಿತ ಪೂರ್ಣ ವಿವರವು ಮೇದ್ಯ ಮತ್ತು ಪರ್ಷಿಯಾ ದೇಶಗಳ ಅರಸರ ಕಾಲವೃತ್ತಾಂತ ಗ್ರಂಥದಲ್ಲಿ ಬರೆಯಲಾಗಿದೆ. 3ಯೆಹೂದ್ಯನಾದ ಮೊರ್ದೆಕೈ ಆದರೋ ಅರಸ ಅಹಷ್ವೇರೋಷನಿಗೆ ದ್ವಿತೀಯ ಸ್ಥಾನವನ್ನು ಹೊಂದಿದವನೂ ಯೆಹೂದ್ಯರಲ್ಲಿ ಸನ್ಮಾನಿತನೂ ತನ್ನ ಬಂಧುಬಳಗದವರಲ್ಲಿ ಪ್ರೀತಿ ಪಾತ್ರನೂ ಸ್ವಜನರ ಹಿತಚಿಂತಕನೂ ಸ್ವಕುಲದವರೆಲ್ಲರಿಗೆ ಶಾಂತಿದೂತನೂ ಆಗಿದ್ದನು.

## ಅನುಬಂಧ: ಮೊರ್ದೆಕೈಯನ ಕನಸಿನ ನೆನಪು

**೬** ಆಗ ಮೊರ್ದೆಕೈ ಈ ಕೆಳಕಂಡ ವಿವರವನ್ನು ನೀಡಿದನು:

2 "ಇದೆಲ್ಲ ದೇವರ ಕಾರ್ಯ. ಇದರ ಬಗ್ಗೆ ನಾನು ಕಂಡ ಕನಸು ಜ್ಞಾಪಕಕ್ಕೆ ಬರುತ್ತದೆ. ಅದರಲ್ಲಿ ನೆರವೇರದೆ ಹೋದುದು ಯಾವುದೂ ಇಲ್ಲ. 3ಚಿಕ್ಕಬುಗ್ಗೆ ನದಿಯಾದದ್ದು, ಮುಂಜಾನೆಯ ಬೆಳಕು ಸೂರ್ಯನ ಸುಡುಬಿಸಿಲಿನಂತೆ ಹೊಳೆದದ್ದು, ನೀರಿನ ಪ್ರವಾಹ ಎಲ್ಲವೂ ಕನಸಿನಂತೆ ನನಸಾಗಿದೆ. ಅರಸನು ಮದುವೆಯಾಗಿ ತನ್ನ ರಾಣಿಯನ್ನಾಗಿ ಮಾಡಿಕೊಂಡ ಎಸ್ತೇರಳೇ ಆ ನದಿ. 4ಎರಡು ಘಟಸರ್ಪಗಳು ಹಾಮಾನನನ್ನೂ ನನ್ನನ್ನೂ ಪ್ರತಿನಿಧಿಸುತ್ತವೆ. 5ಯೆಹೂದ್ಯರನ್ನು ನಾಶಗೊಳಿಸಲು ಸೇರಿದ ರಾಷ್ಟ್ರಗಳೇ ಆ ನಾಡುಗಳು. 6ಪ್ರತ್ಯೇಕವಾಗಿದ್ದ ಆ ಒಂದು ರಾಷ್ಟ್ರವೇ ದೇವರಿಗೆ ಮೊರೆಯಿಟ್ಟು ರಕ್ಷಣೆ ಹೊಂದಿದ ನಮ್ಮ ಇಸ್ರಯೇಲಿನ ಜನಾಂಗ.

"ಸರ್ವೇಶ್ವರ ತಮ್ಮ ಜನರನ್ನು ಕಾಪಾಡಿದ್ದಾರೆ; ನಮ್ಮನ್ನು ಎಲ್ಲಾ ಕೇಡುಗಳಿಂದ ಪಾರು ಮಾಡಿದ್ದಾರೆ. ಇತರ ರಾಷ್ಟ್ರಗಳಿಗೆ ಎಂದೂ ಮಾಡದ ಪವಾಡಕಾರ್ಯಗಳನ್ನು ನಮ್ಮಲ್ಲಿ ಎಸಗಿದ್ದಾರೆ. 7ಕಾರಣ, ದೇವರು ತಮ್ಮ ಸ್ವಂತ ಜನರಿಗೆ ಒಂದು ಯೋಜನೆಯನ್ನು, ಇತರ ರಾಷ್ಟ್ರಗಳವರಿಗೆ ಮತ್ತೊಂದು ಯೋಜನೆಯನ್ನು, ಗೊತ್ತುಮಾಡಿದ್ದಾರೆ. 8ನಿಯಮಿತ ಕಾಲದಲ್ಲಿ, ನಿಯಮಿತ ಗಳಿಗೆಯಲ್ಲಿ ಆಯಾ ರಾಷ್ಟ್ರಗಳಿಗೆ ಅನ್ವಯಿಸುವಂಥ ತೀರ್ಪನ್ನು ನೀಡಬೇಕಾಗಿತ್ತು. 9ದೇವರು ಸ್ವಜನರನ್ನು ನೆನಸಿಕೊಂಡು ತಮ್ಮ ಸ್ವಾಸ್ತ್ಯದ ಪರವಾಗಿ ನ್ಯಾಯಬದ್ಧ ತೀರ್ಪನ್ನು ನಿಡಿದ್ದಾರೆ. 10ಆದುದರಿಂದ, ಇನ್ನು ಮುಂದೆ ಸದಾಕಾಲಕ್ಕೂ ಪ್ರತೀವರ್ಷ ಫಾಲ್ಗುಣಮಾಸದ ಹದಿನಾಲ್ಕನೆ ಮತ್ತು ಹದಿನೈದನೆ ದಿನದಲ್ಲಿ, ಇಸ್ರಯೇಲಿನ ಪ್ರಜೆಗಳು ದೇವರ ಸನ್ನಿಧಿಯಲ್ಲಿ ಒಟ್ಟಾಗಿ ಸೇರಿ, ಈ ಉತ್ಸವವನ್ನು ಸಂಭ್ರಮದಿಂದ, ಸಡಗರದಿಂದ ಆಚರಿಸಬೇಕು."

## ಅನುಬಂಧ: ಗ್ರೀಕ್ ಅನುವಾದವನ್ನು ಕುರಿತದ್ದು

ತೊಲಮಾಯ ಮತ್ತು ಕ್ಲಿಯೋಪಾತ್ರ ಎಂಬವರ ನಾಲ್ಕನೆ ವರ್ಷದಲ್ಲಿ ಲೇವಿಯ ವಂಶಜನಾದ ಯಾಜಕನೆಂದು ಹೇಳಿಕೊಂಡ ದೊಸಿತೇಯನೆಂಬವನು ಪೂರಿಮ್ ಮಹೋತ್ಸವ ಕುರಿತಾದ ಮೇಲ್ಕಂಡ ಪತ್ರವನ್ನು ಈಜಿಪ್ಟಿಗೆ ತಂದನು. ಅವನೊಂದಿಗೆ ತೊಲಮಾಯ ಎಂಬ ಅವನ ಮಗನೂ ಇದ್ದನು. ಈ ಪತ್ರವು ಸತ್ಯವಾದದ್ದು, ಅದನ್ನು ಅನುವಾದಿಸಿದವನು ಜೆರುಸಲೇಮಿನಲ್ಲಿ ನಿವಾಸಿಯಾಗಿದ್ದ ತೊಲಮಾಯನ ಮಗ ಲಿಸಿಮಾಕ ಎಂದು ಅವರು ದೃಢೀಕರಿಸಿದ್ದಾರೆ.